ಕನ್ನಡಪ್ರಭ
ಸೋಮವಾರ 4.05.2026

ಹೆಚ್ಚಿನ ಸುದ್ದಿ ಪುಟ 9ರಲ್ಲಿ

ಗರಿಷ್ಠ 34°c ಕನಿಷ್ಠ 23°c

ಸುದ್ದಿ ಸಿಂಚನ

ಬುದ್ಧನ ಸಿದ್ಧಾಂತಗಳನ್ನು ಎಲ್ಲರೂ ಪಾಲಿಸಿ

ಬಂಗಾರಪೇಟೆ: ಇಂದಿನ ಅಶಾಂತಿಯ ವಾತಾವರಣದಲ್ಲಿ ಬುದ್ಧನ ಅಹಿಂಸಾ ಮಾರ್ಗ ಮತ್ತು ಕರುಣೆಯ ವಿಚಾರ ಧಾರೆಗಳು ಸಮಾಜಕ್ಕೆ ದಾರಿದೀಪವಾಗಿವೆ ಎಂದು ಸುಹೇಲ್ ದೇವ್ ಭಾರತೀಯ ಸಮಾಜ ಪಕ್ಷದ ರಾಜ್ಯಾಧ್ಯಕ್ಷ ಅಭಿಮನ್ಯು ಪಿ.ಮಣಿ ಹೇಳಿದರು. ನಗರದ ಗಂಗಮ್ಮನಪಾಳ್ಯದ ತೋಟದ ಮನೆಯಲ್ಲಿರುವ ಪಕ್ಷದ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಬುದ್ಧ ಪೌರ್ಣಮಿ ಹಾಗೂ ಕಾರ್ಮಿಕ ದಿನಾಚರಣೆಯಲ್ಲಿ ಬುದ್ಧನ ಪುತ್ಥಳಿಗೆ ಪುಷ್ಪಾರ್ಚನೆ ಮಾಡಿ ಮಾತನಾಡಿ, ಪ್ರತಿಯೊಬ್ಬರೂ ಬುದ್ಧನ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಮತ್ತು ಜಾತಿ, ಧರ್ಮಗಳ ಭೇದವಿಲ್ಲದೆ ಮನುಕುಲವನ್ನು ಒಂದೇ ಎಂದು ಪರಿಗಣಿಸಿದ ಬುದ್ಧನ ಸಮಾನತೆಯ ಆಶಯಗಳನ್ನು ಎತ್ತಿಹಿಡಿಯುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಬುದ್ಧ ಕೇವಲ ಒಂದು ಧರ್ಮಕ್ಕೆ ಸೀಮಿತವಾದವರಲ್ಲ, ಅವರು ಇಡೀ ಮಾನವಕುಲಕ್ಕೆ ಬೆಳಕನ್ನು ನೀಡಿದ ಮಹಾನ್ ಚೇತನ. ಅವರ ಅಹಿಂಸಾ ಮಾರ್ಗದಲ್ಲಿ ಸಾಗುವುದು ಇಂದಿನ ತುರ್ತು ಅಗತ್ಯವಾಗಿದೆ ಎಂದು ತಿಳಿಸಿದರು. ಸುಹೇಲ್ ದೇವ್ ಭಾರತೀಯ ಸಮಾಜ ಪಕ್ಷದ ದಕ್ಷಿಣ ರಾಜ್ಯಗಳ ಉಸ್ತುವಾರಿಯನ್ನು ತಮಗೆ ನೀಡಲಾಗಿದ್ದು, ಮುಂಬರುವ ದಿನಗಳಲ್ಲಿ ದಕ್ಷಿಣ ಭಾರತದ ಎಲ್ಲಾ ರಾಜ್ಯಗಳಲ್ಲಿ ಪಕ್ಷವನ್ನು ಬಲಿಷ್ಠವಾಗಿ ಸಂಘಟಿಸಲು ಶ್ರಮಿಸುವುದಾಗಿ ಮತ್ತು ಪಕ್ಷದ ಸಂಘಟನೆಗಾಗಿ ಶೀಘ್ರದಲ್ಲೇ ರಾಜ್ಯದ ಮೂಲೆ ಮೂಲೆಗಳಲ್ಲಿ ಪ್ರವಾಸ ಕೈಗೊಂಡು ಕಾರ್ಯಕರ್ತರನ್ನು ಹುರಿದುಂಬಿಸಲಾಗುವುದು, ಪಕ್ಷದ ಮೂಲ ತತ್ವಗಳು ಮತ್ತು ಸಿದ್ಧಾಂತಗಳನ್ನು ಜನಸಾಮಾನ್ಯರಿಗೆ ತಲುಪಿಸುವ ಮೂಲಕ ತಳಮಟ್ಟದಿಂದ ಪಕ್ಷವನ್ನು ಬಲಪಡಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಪಿವಿಸಿ ಮಣಿ, ಕೋಲಾರಪ್ಪ, ಕುಪ್ಪಂ ಮಧು, ಮಾಗೊಂದಿ ನಾರಾಯಣಸ್ವಾಮಿ, ಮಲ್ಲಿಕಾ ಇದ್ದರು.

ಬದುಕಿನಲ್ಲಿ ಬುದ್ಧರ ತತ್ವ ಅಳವಡಿಸಿಕೊಳ್ಳಿ: ಡಿಸಿ

ಕೋಲಾರ: ಭಗವಾನ್ ಬುದ್ಧರ ತತ್ವ, ಸಿದ್ಧಾಂತಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡಾಗ ಮಾತ್ರ ಶಾಂತಿ ನೆಲೆಸಲು ಸಾಧ್ಯವೆಂದು ಜಿಲ್ಲಾಧಿಕಾರಿ ಡಾ.ಎಂ.ಆರ್. ರವಿ ಅಭಿಪ್ರಾಯಪಟ್ಟರು. ನಗರದ ಟಿ.ಚೆನ್ನಯ್ಯ ರಂಗಮಂದಿರದಲ್ಲಿ ಜಿಲ್ಲಾಡಳಿತ, ಜಿಪಂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಭಗವಾನ್ ಬುದ್ಧರ ಜಯಂತಿ ಆಚರಣೆಯಲ್ಲಿ ಭಗವಾನ್ ಬುದ್ಧರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದರು. ಬುದ್ಧರು ಇಡೀ ಜಗತ್ತಿಗೆ ಶಾಂತಿ, ಕರುಣೆ ಹಾಗೂ ಸಹಬಾಳ್ವೆ ಸಂದೇಶ ನೀಡಿ ಜಗಕ್ಕೆ ಬೆಳಕಾದವರು. ಅವರ ವಿಚಾರ ಧಾರೆ ಇಂದಿನ ಸಮಾಜಕ್ಕೆ ಪ್ರಸ್ತುತವಾಗಿವೆ. ಉತ್ತಮ ವ್ಯಕ್ತಿತ್ವ ರೂಪಿಸಿಕೊಳ್ಳಲು ಬುದ್ಧರ ಚಿಂತನೆ ಅಗತ್ಯ. ಸರ್ಕಾರದಿಂದ ಗೌತಮ ಬುದ್ಧರ ಜಯಂತಿ ಆಚರಿಸುತ್ತಿರುವುದು ಸಂತೋಷದ ವಿಚಾರ ಎಂದು ಹೇಳಿದರು. ಕಂದಾಚಾರ, ಮೌಢ್ಯ, ಹಿಂಸೆಗಳನ್ನು ಪ್ರತಿರೋಧಿಸುವ ಮೂಲಕ ಬುದ್ಧ, ಬಸವ, ಅಂಬೇಡ್ಕರ್‌ಸಂದೇಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ಮಾನವನಾಗಲು ಸಾಧ್ಯ ಎಂದರು. ಎಡಿಸಿ ಮಂಗಳ, ಎಸಿ ಜಂಬಂಗಿ ರೇಣುಕಾಪ್ರಸಾದ್, ಜಿಪಂ ಉಪ ಕಾರ್ಯದರ್ಶಿ ರಮೇಶ್, ತಹಸೀಲ್ದಾರ್‌ನಯನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕಿ ವಿಜಯಲಕ್ಷ್ಮೀ, ಪೊಲೀಸ್ ಅಧೀಕ್ಷಕ ಜಗದೀಶ್, ಉಪನ್ಯಾಸಕ ಅರಿವು ಶಿವಪ್ಪ ಮುಖಂಡರಾದ ಪಂಡಿತ್ ಮುನಿವೆಂಕಟಪ್ಪ, ವಿಜಯಕುಮಾರ್ ಇದ್ದರು.

ರಾಜೀ ಸಂಧಾನದಿಂದ ಕೇಸುಗಳ ಇತ್ಯರ್ಥಕ್ಕೆ ಕರೆ

ಮುಳಬಾಗಿಲು: ಸರ್ವೋಚ್ಚ ನ್ಯಾಯಾಲಯದಲ್ಲಿ ರಾಜ್ಯದ 4378 ಕೇಸುಗಳು ವಿಚಾರಣೆ ಹಂತದಲ್ಲಿದ್ದು, ಅನಗತ್ಯವಾಗಿ ಸುಪ್ರೀಂ ಕೋರ್ಟಿಗೆ ಅಲೆದಾಡುವುದನ್ನು ತಪ್ಪಿಸಲು ಸ್ಥಳೀಯವಾಗಿ ತಾಲೂಕು ಮತ್ತು ಜಿಲ್ಲಾ ಹಾಗೂ ರಾಜ್ಯ ಕೇಂದ್ರ ಸ್ಥಾನ ಬೆಂಗಳೂರು ಕೋರ್ಟುಗಳಲ್ಲಿ ವಿಶೇಷ ಲೋಕ ಅದಾಲತ್ ಏರ್ಪಡಿಸಿದ್ದು ಕಕ್ಷಿದಾರರು ಇದರ ಸದುಪಯೋಗ ಪಡೆಯಬೇಕು ಎಂದು ತಾಲೂಕು ಕಾನೂನು ಸೇವಾ ಸಮಿತಿ ಸದಸ್ಯ, ಕಾರ್ಯದರ್ಶಿ ಜಿ. ಹರೀಶ್ ತಿಳಿಸಿದ್ದಾರೆ. ಇಲ್ಲಿನ ನ್ಯಾಯಾಲಯದಲ್ಲಿ ಬೆಂಗಳೂರಿನ ಹೈಕೋರ್ಟ್‌ನಲ್ಲಿ ನಡೆದ ಪತ್ರಿಕಾಗೋಷ್ಠಿ ನೇರ ಪ್ರಸಾರ ಹಾಗೂ ವಿಡಿಯೋ ಕಾನ್ಫರೆನ್ಸ್‌ನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದರು. ಸುಪ್ರೀಂ ನಿರ್ದೇಶನದ ಮೇರೆಗೆ ಆ.21ರಿಂದ 23ರವರೆಗೂ ಎಲ್ಲಾ ನ್ಯಾಯಾಲಯಗಳಲ್ಲಿ ವಿಶೇಷ ಲೋಕ ಅದಾಲತ್ ನಡೆಯಲಿದ್ದು ಇದರಿಂದ ಹಲವು ವರ್ಷಗಳಿಂದ ಬಾಕಿ ಉಳಿದಿರುವ ಕೇಸು ಇತ್ಯರ್ಥ ಪಡಿಸಲು ಅನುಕೂಲ ಎಂದು ತಿಳಿಸಿದರು.



ಬಂಗಾರಪೇಟೆ ನಗರದ ಎಸ್‌ಬಿಎಸ್‌ಪಿ ಕಚೇರಿಯಲ್ಲಿ ಬುದ್ಧ ಪೌರ್ಣಮಿಯನ್ನು ಆಚರಿಸಲಾಯಿತು. ಪಕ್ಷದ ರಾಜ್ಯಾಧ್ಯಕ್ಷ ಅಭಿಮನ್ಯು ಮಣಿ ಮಾತನಾಡಿದರು.


ಕೋಲಾರದ ಟಿ.ಚೆನ್ನಯ್ಯ ರಂಗಮಂದಿರದಲ್ಲಿ ಭಗವಾನ್ ಬುದ್ಧರ ಜಯಂತಿ ಆಚರಣೆಯಲ್ಲಿ ಭಗವಾನ್ ಬುದ್ಧರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಜಿಲ್ಲಾಧಿಕಾರಿ ಡಾ.ಎಂ.ಆರ್.ರವಿ ಮಾತನಾಡಿದರು.



ವೇಣುಗೋಪಾಲಸ್ವಾಮಿ ದೇವಾಲಯಕ್ಕೆ ದೇಣಿಗೆ

ಮುಳಬಾಗಿಲು: ತಾಲೂಕಿನ ವಮ್ಮಸಂದ್ರ ವಲಯದ ಕದರಿಪುರ ಕಾರ್ಯ ಕ್ಷೇತ್ರದಲ್ಲಿ ಕದರಿಪುರ ವೇಣುಗೋಪಾಲಸ್ವಾಮಿ ದೇವಸ್ಥಾನ ನಂದಗೋಕುಲ ಸೇವಾ ಟ್ರಸ್ಟ್‌ನ ಸದಸ್ಯರಿಗೆ ದೇವಸ್ಥಾನದ ನಿರ್ಮಾಣ ಕಾರ್ಯಕ್ಕೆ ಶ್ರೀ ಕ್ಷೇತ್ರ ಧರ್ಮಸ್ಥಳದಿಂದ ಮಂಜುನಾಥ ಸ್ವಾಮಿ ಪ್ರಸಾದ 2 ಲಕ್ಷ ರು.ಗಳನ್ನು ಕ್ಷೇತ್ರದ ಯೋಜನಾಧಿಕಾರಿ ನವೀನ್ ಕುಮಾರ್ ಎಚ್.ಡಿ ಹಸ್ತಾಂತರಿಸಿದರು. ಟ್ರಸ್ಟ್ ಅಧ್ಯಕ್ಷ ಬಾಲಕೃಷ್ಣ, ಉಪಾಧ್ಯಕ್ಷ ತಿಪ್ಪಯ್ಯ, ಕಾರ್ಯದರ್ಶಿ ಸುಬ್ರಮಣ, ಗೌರವಾಧ್ಯಕ್ಷ ಸೋಮಶೇಖರ್, ಗ್ರಾಪಂ ಸದಸ್ಯ ಮಂಜುನಾಥ ಇತರರಿದ್ದರು.

ಬುದ್ಧನ ತತ್ವ ಪಾಲಿಸಿದರೆ ಜಗತ್ತಿನಲ್ಲಿ ಶಾಂತಿ, ನೆಮ್ಮದಿ

ಕಾವ್ಯ ಬೆಳದಿಂಗಳು–2026 ಕವಿಗೋಷ್ಠಿಗೆ ಚಾಲನೆ ನೀಡಿ ಸಿಎಂ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್

• **ಕನ್ನಡಪ್ರಭ ವಾರ್ತೆ** ಕೋಲಾರ

ಬುದ್ಧ, ಕಾವ್ಯ ಮತ್ತು ಬೆಳದಿಂಗಳು ಈ ಮೂರರ ನಡುವೆ ಅವಿನಾಭಾವ ಸಂಬಂಧವಿದೆ. ಇಂದಿನ ಯುದ್ಧದ ಕಾರ್ಮೋಡಗಳ ನಡುವೆ ಬುದ್ಧ ಹೆಚ್ಚು ಪ್ರಸ್ತುತನಾಗಿದ್ದಾನೆ. ಬುದ್ಧನ ಬದುಕು ಲೌಕಿಕ ಜಗತ್ತಿಗೆ ಅಗತ್ಯವಿರುವ ಕಾವ್ಯ ಔಷಧದಂತಿದೆ ಎಂದು ಸಿಎಂ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್‌ತಿಳಿಸಿದರು.

ತಾಲೂಕಿನ ಮಂಗಸಂದ್ರದ ಬೆಂಗಳೂರು ಉತ್ತರ ವಿವಿ ಸುವರ್ಣಗಂಗೆ ಸ್ನಾತಕೋತ್ತರ ಕೇಂದ್ರದಲ್ಲಿ ಬುದ್ಧ ಪೂರ್ಣಿಮಾ ಅಂಗವಾಗಿ ಕಾವ್ಯ ಬೆಳದಿಂಗಳು-2026 ಕವಿಗೋಷ್ಠಿಗೆ ಚಾಲನೆ ನೀಡಿ ಮಾತನಾಡಿ, ಪದ ಪಾಂಡಿತ್ಯಕ್ಕಿಂತ ಸತ್ಯ ಮತ್ತು ಸರಳತೆಯೇ ಬುದ್ಧನ ದೃಷ್ಟಿಯಾಗಿತ್ತು. ಕವಿಗಳ ಲೇಖನಿಯಿಂದ ಬರುವ ಪ್ರತಿ ಸಾಲು ಜಗತ್ತಿಗೆ ಪ್ರೀತಿಯನ್ನು ಹಂಚಲಿ ಎಂದು ಹಾರೈಸಿದರು.

ಸಿಎಂ ಆಪ್ತ ಕಾರ್ಯದರ್ಶಿ ಡಾ.ನೆಲಕುಂಟೆ ವೆಂಕಟೇಶಯ್ಯ, ಬುದ್ಧ ನಮನ ಸಲ್ಲಿಸಿ, ಬುದ್ಧ ಎನ್ನುವ ವ್ಯಕ್ತಿತ್ವ ಮನುಷ್ಯ ಲೋಕವು ಲಕ್ಷಾಂತರ ವರ್ಷಗಳ ನಂತರ ಕಂಡುಕೊಂಡ ಅತ್ಯಂತ ಅದ್ಭುತವಾದ ಶಕ್ತಿ. ಅವರು ಕೇವಲ ಏಷ್ಯಾದ ಬೆಳಕಲ್ಲ, ಇಡೀ ಮಾನವ ಕುಲದ ಅರಿವಿನ ಬೆಳಕು ಎಂದು ಬಣ್ಣಿಸಿದರು.

ಬೌದ್ಧ ಪರಂಪರೆ ಮತ್ತು ಸಮಕಾಲೀನ ಸಮಾಜದ ಕುರಿತು ಮಾತನಾಡಿದ ಅವರು, ಕೋಲಾರದ ನೆಲಕ್ಕೂ ಬೌದ್ಧ ಧರ್ಮಕ್ಕೂ ಅವಿನಾಭಾವ ಸಂಬಂಧ ಇದೆ. ಎರಡು ಸಾವಿರ ವರ್ಷಗಳ ಹಿಂದೆ ಇಂದ್ರ ಸಂಸ್ಕೃತಿಯ ಎದುರು ಬೌದ್ಧ ಸಂಸ್ಕೃತಿಯನ್ನು ಕಟ್ಟಿದ ಮಹನೀಯರಲ್ಲಿ ಬುದ್ಧ ಮೊದಲಿಗ ಎಂದರು.

ಅಧಿಕಾರ ಮತ್ತು ವಿಜ್ಞಾನ, ವಿಜ್ಞಾನದ ಮೂಲಕ ದೊರೆಯುವ ಶಕ್ತಿ. ಸತ್ಯದ ಮಾರ್ಗ (ಕಾವ್ಯ) ವ್ಯಾಸ, ವಾಲ್ಮೀಕಿ, ರೂಮಿ, ಟ್ಯಾಗೋರ್‌ಅಂತಹವರು ಕಂಡುಕೊಂಡ ಸತ್ಯ. ಭವ್ಯತೆಯ ಮಾರ್ಗ ಮಹಾವೀರ, ಜೀಸಸ್, ಮೊಹಮ್ಮದ್ ಪೈಗಂಬರ್ ಅವರಂತಹವರು ತೋರಿದ ದಾರಿ ಎಂದರು.

ಬುದ್ಧ ಈ ಮೂರೂ ಮಾರ್ಗಗಳ ಸಮನ್ವಯತೆ. ಅವನು ಒಬ್ಬ ಸಂತ, ಒಬ್ಬ ಕವಿ ಮತ್ತು ಒಬ್ಬ ಆದಿ ವಿಜ್ಞಾನಿ. ಈ ಮೂರು ವ್ಯಕ್ತಿತ್ವಗಳು ಒಟ್ಟುಗೂಡಿದ ಇಂತಹ ಅದ್ಭುತ ಶಕ್ತಿ ಬುದ್ಧನ ನಂತರ ಮತ್ತೆ ಬರಲು ಸಾಧ್ಯವಾಗಿಲ್ಲ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಡಾ.ಕೆ.ಶರೀಫಾ, ದೂರದರ್ಶನ ಕೇಂದ್ರದ ಕಾರ್ಯಕ್ರಮ ಮುಖ್ಯಸ್ಥೆ ಎಚ್.ಎನ್.ಆರತಿ, ಅವಧಿ ಪತ್ರಿಕೆಯ ಸಂಪಾದಕ ಜಿ.ಎನ್.ಮೋಹನ್, ಸಾಹಿತಿ ಲಕ್ಷ್ಮಿಪತಿ ಕೋಲಾರ, ಕುಲಪತಿ ಡಾ.ಬಿ.ಕೆ.ರವಿ, ಕುಲಸಚಿವ ಪ್ರೊ.ಎನ್. ಲೋಕನಾಥ್, ಹಣಕಾಸು ಅಧಿಕಾರಿ ವಸಂತಕುಮಾರ್‌ಬಿ.ವಿ., ಕ್ಯಾಂಪಸ್ ನಿರ್ದೇಶಕಿ ಪ್ರೊ.ಡಿ.ಕುಮುದ, ಡಾ.ರಮೇಶ್ ಎಂ.ಎನ್ ಇದ್ದರು. 50ಕ್ಕೂ ಹೆಚ್ಚು ಕವಿಗಳು ತಮ್ಮ ಕವನಗಳನ್ನು ವಾಚಿಸಿದರು. ಗಾಯತ್ರಿ ದೇವಿ ನೇತ್ರಾವತಿ ಕಾರ್ಯಕ್ರಮ ನಿರೂಪಿಸಿದರು.


ಸಿಎಂ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಕೋಲಾರ ತಾಲೂಕು ಮಂಗಸಂದ್ರದ ಬೆಂಗಳೂರು ಉತ್ತರ ವಿವಿ ಸುವರ್ಣಗಂಗೆ ಸ್ನಾತಕೋತ್ತರ ಕೇಂದ್ರದ ಆವರಣದಲ್ಲಿ ಕಾವ್ಯ ಬೆಳದಿಂಗಳು – 2026 ಹಾಗೂ ಬುದ್ಧ ಜಯಂತಿ ಕವಿಗೋಷ್ಠಿಗೆ ಚಾಲನೆ ನೀಡಿದರು.

ಜಮೀನು ಮಂಜೂರು ಮಾಡಲು ಮನವಿ

ಕೋಲಾರ: ಸಮಾಜದ ಚಿಂತನೆಯಲ್ಲಿ ದುಡಿಯುವ ಪತ್ರಕರ್ತರಿಗೆ ಸೂರು ಕಲ್ಪಿಸಲು ಅಗತ್ಯ ನಿವೇಶನಕ್ಕಾಗಿ ಪ್ರತಿ ತಾಲೂಕಿನಲ್ಲೂ ತಲಾ 5 ಎಕರೆ ಜಮೀನು ಮಂಜೂರು ಮಾಡುವಂತೆ ಕೋರಿ ಸಿಎಂ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್ ಹಾಗೂ ಎಂಎಲ್ಸಿ ಕೆ.ಶಿವಕುಮಾರ್ ಅವರಿಗೆ ಪತ್ರಕರ್ತರ ಸಹಕಾರ ಸಂಘದಿಂದ ಮನವಿ ಸಲ್ಲಿಸಿದರು.

ಜಿಲ್ಲಾ ಪತ್ರಕರ್ತರ ಸಹಕಾರ ಸಂಘದ ಅಧ್ಯಕ್ಷ ಕೆ.ಎಸ್.ಗಣೇಶ್, ಕಾರ್ಯನಿರತ ಪತ್ರಕರ್ತರಸಂಘದಅಧ್ಯಕ್ಷಎಸ್.ಕೆ.ಚಂದ್ರಶೇಖರ್ ಜಂಟಿಯಾಗಿ ಮನವಿ ಸಲ್ಲಿಸಿ, ಜಿಲ್ಲೆಯಲ್ಲಿ ಅನೇಕ ಪತ್ರಕರ್ತರು ಸ್ವಂತ ಸೂರಿಲ್ಲದೇ ಜೀವನ ನಡೆಸುತ್ತಿದ್ದಾರೆ ಎಂದು ಗಮನಕ್ಕೆ ತಂದರು.

ಕೆ.ಎಸ್.ಗಣೇಶ್ ಮಾತನಾಡಿ, ಸರ್ಕಾರದಿಂದ ಜಮೀನು ಮಂಜೂರು ಮಾಡಿಸಿದಲ್ಲಿ ಪತ್ರಕರ್ತರ ವಿವಿಧೋದ್ದೇಶ ಸಹಕಾರ ಸಂಘದ ಮೂಲಕ ನಿವೇಶನ ಅಭಿವೃದ್ಧಿಪಡಿಸಿ ವೃತ್ತಿನಿರತ ಪತ್ರಕರ್ತರಿಗೆ ಹಂಚಲು ಕ್ರಮವಹಿಸುವುದಾಗಿ ನುಡಿದರು.

ಎಂಎಲ್ಸಿ ಶಿವಕುಮಾರ್‌ಹಾಗೂ ಕೆ.ವಿ.ಪ್ರಭಾಕರ್‌ಈ ಕುರಿತು ಸಕಾರಾತ್ಮಕವಾಗಿ ಸ್ಪಂದಿಸಿ, ಸಿಎಂ ಗಮನಕ್ಕೆ ತರುವುದಾಗಿಯೂ ತಿಳಿಸಿದರು. ಈ ಸಂಬಂಧ ಜಿಲ್ಲಾಧಿಕಾರಿಗೂ ಪತ್ರ ಬರೆಯುವುದಾಗಿ ನುಡಿದರು.

ಜಿಲ್ಲಾ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಎ.ಜಿ.ಸುರೇಶ್ ಕುಮಾರ್, ಖಜಾಂಚಿ ರಾಜೇಂದ್ರ ಸಿಂಹ, ರಾಜ್ಯಕಾರ್ಯಕಾರಿ ಸದಸ್ಯ ವಿ.ಮುನಿರಾಜು, ಕಾರ್ಯನಿರತ ಪತ್ರಕರ್ತರ ಸಂಘದ ವಿವಿಧೋದ್ದೇಶ ಸಹಕಾರ ಸಂಘದ ಉಪಾಧ್ಯಕ್ಷ ಅಬ್ಬಣಿ ಶಂಕರ್, ಪತ್ರಕರ್ತರಾದ ಮಹಮದ್ ಯೂನುಸ್, ಸದಾನಂದ್ ವೆಂಕಟೇಶ್‌ಬಾಬಾ, ಮುರಳೀಧರ್‌ಇದ್ದರು.

ಮಾವಿನ ಫಸಲು ಹಾನಿ: ಅಧಿಕಾರಿಗಳೊಂದಿಗೆ ಶಾಸಕರ ಭೇಟಿ

ಬೇತಮಂಗಲ: ಶಾಸಕಿ ಎಂ. ರೂಪಕಲಾ ನಕ್ಕನಹಳ್ಳಿಬಳಿಇತ್ತೀಚೆಗೆಗಾಳಿ-ಆಲಿಕಲ್ಲು ಮಳೆಗೆ ಮಾವಿನ ಫಸಲು ನಾಶವಾಗಿದ್ದು, ರೈತರ ತೋಟಗಳಿಗೆ ಭೇಟಿ ನೀಡಿ ಪರಿಶೀಲಿಸಿದರು.

ಶಾಸಕಿ ಎಂ.ರೂಪಕಲಾ ಮಾತನಾಡಿ, ರೈತ ನೆಮ್ಮದಿಯಾಗಿದ್ದರೆ ದೇಶ ನೆಮ್ಮದಿ, ರೈತರು ಸಾಲ ಮಾಡಿ ಮಾವಿನ ತೋಟ ಮಾಡಿದ್ದು ಒಳ್ಳೆಯ ಫಸಲು ಬಂದ ಸಂದರ್ಭದಲ್ಲಿ ಈ ರೀತಿ ಆಗಿರುವುದು ರೈತರಿಗೆ ತುಂಬಲಾರದ ನಷ್ಟ ಎಂದು ನೋವು ವ್ಯಕ್ತಪಡಿಸಿದರು.

ಕೆಜಿಎಫ್ ತಾಲೂಕಿನಲ್ಲಿ ಸಾಕಷ್ಟು ಮಾವು ಬೆಳೆಗಾರರಿದ್ದು ಎಲ್ಲೆಲ್ಲಿ ಈ ರೀತಿ ನಷ್ಟವಾಗಿದಿಯೋ ಮಾಹಿತಿ ಪಡೆದು ರಾಷ್ಟ್ರೀಯ ವಿಪತ್ತು ಪರಿಹಾರನಿಧಿಯಿಂದ ಸೂಕ್ತ ಪರಿಹಾರ ಒದಗಿಸಲು ಜಿಲ್ಲಾಧಿಕಾರಿಗಳನ್ನು ಕೋರಲಾಗುವುದು ಎಂದರು.

ರೈತರಿಗೆ ಈಗ ಆಗಿರುವ ನಷ್ಟದ ಬಗ್ಗೆ ಸಿಎಂ ಗಮನಕ್ಕೆ ತಂದು ಸರ್ಕಾರದಿಂದ ಸೂಕ್ತ ಪರಿಹಾರ ಒದಗಿಸಲಾಗುವುದು. ವಾಣಿಜ್ಯ ಬೆಳೆಗಳನ್ನು ಬೆಳೆಯುವ ರೈತರು ಬೆಳೆ ವಿಮೆ ಮಾಡಿಸದೇ ಸಂಕಷ್ಟಕ್ಕೆ ಸಿಲುಕಿದ್ದು ಅಗತ್ಯ ಮಾಹಿತಿ ಒದಗಿಸಲು ಸ್ಥಳದಲ್ಲಿದ್ದ ತೋಟಗಾರಿಕಾ ಇಲಾಖೆಯ ಸಹಾಯಕ ನಿರ್ದೇಶಕರಿಗೆ ತಿಳಿಸಿದರು.

ಇದೇ ಸಂದರ್ಭದಲ್ಲಿ ಏತೂರು ಬಳಿ ಸುಮಾರು 2.00 ಎಕರೆಯಲ್ಲಿ ಬಾಳೆ ತೋಟ ನಾಶವಾಗಿರುವುದನ್ನು ವೀಕ್ಷಿಸಿದರು. ರೈತರಿಗೆ ಪರಿಹಾರ ಒದಗಿಸಲು ಬೇಕಾಗಿರುವ ಅಗತ್ಯ ದಾಖಲೆ ಖುದ್ದು ರೈತರ ಮನೆಗೆ ಹೋಗಿ ಪಡೆಯಲು ಅಧಿಕಾರಿಗಳಿಗೆ ಸೂಚಿಸಿದರು.

ಇದೇ ಸಂದರ್ಭದಲ್ಲಿ ಕಸಿರೆಡ್ಡಿಗಾಂಡ್ಲಹಳ್ಳಿ ಗೇಟ್ ಬಳಿ ಭಾರೀ ಗಾಳಿಗೆ ಸಮೀಪವಿದ್ದ ಶೆಡ್ಡಿನ ಶೀಟುಗಳು ಹಾರಿ ಹಾಗೂ ಮರ ಉರುಳಿ ಸುಮಾರು 15 ವಿದ್ಯುತ್ ಕಂಬಗಳು ಮುರಿದಿರುವುದನ್ನು ಶಾಸಕರು ವೀಕ್ಷಿಸಿದರು.

ಮಾವು ಬೆಳೆಗಾರರ ಕ್ಷೇಮಾಭಿವೃದ್ಧಿ ಸಂಘದ ತಾಲೂಕು ಅಧ್ಯಕ್ಷ ಅಭಿಲಾಶ್ ರೆಡ್ಡಿ, ಗ್ಯಾರಂಟಿ ಸಮಿತಿ ಅಧ್ಯಕ್ಷ ರಾಧಾಕೃಷ್ಣ ರೆಡ್ಡಿ, ನಕ್ಕನಹಳ್ಳಿ ಚಂದ್ರ ಇದ್ದರು.


ಆಲಿಕಲ್ಲು ಮಳೆಗೆ ಮಾವಿನ ಫಸಲು ನಷ್ಟವಾಗಿರುವುದನ್ನು ಶಾಸಕಿ ಎಂ.ರೂಪಕಲಾ ತೋಟಗಾರಿಕಾ ಇಲಾಖೆ ಅಧಿಕಾರಿಗಳೊಂದಿಗೆ ಭೇಟಿ ನೀಡಿ ಪರಿಶೀಲಿಸುತ್ತಿರುವುದು.

ಶಾಲಾ ಶಿಕ್ಷಕರ ಸಂಘದ ಚುನಾವಣೆ: ಅಶೋಕ್ ಕುಮಾರ್ ಬಣಕ್ಕೆ ಗೆಲುವು

ಚಿಂತಾಮಣಿ: ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲೂಕು ಘಟಕಕ್ಕೆ ನಡೆದ ಚುನಾವಣೆಯಲ್ಲಿ ಆರ್. ಅಶೋಕ್ ಕುಮಾರ್‌ನೇತೃತ್ವದ ಬಣವು ಭರ್ಜರಿ ಜಯ ದಾಖಲಿಸಿದೆ.

ಒಟ್ಟು 13 ಸ್ಥಾನಗಳ ಪೈಕಿ ಪುರುಷರ ವಿಭಾಗದಲ್ಲಿ 4 ಹಾಗೂ ಮಹಿಳಾ ವಿಭಾಗದಲ್ಲಿ 3 ಸ್ಥಾನಗಳು ಸೇರಿ ಪ್ರಮುಖ ಸ್ಥಾನಗಳನ್ನು ಗೆಲ್ಲುವ ಮೂಲಕ ಅಶೋಕ್ ಕುಮಾರ್ ಬಣವು ಸಂಘದ ಆಡಳಿತ ಚುಕ್ಕಾಣಿ ಹಿಡಿಯುವುದು ಈಗ ಅಧಿಕೃತಗೊಂಡಂತಾಗಿದೆ.

ನಗರದ ಮಹಾತ್ಮ ಗಾಂಧಿ ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲೂಕು ಘಟಕಕ್ಕೆ ಹೈಕೋರ್ಟ್ ಆದೇಶದ ಅನ್ವಯ ನಡೆದ ಚುನಾವಣೆಯ ಮತ ಎಣಿಕೆಯು ತಡರಾತ್ರಿವರೆಗೆ ನಡೆದಿದ್ದು, ಪ್ರತಿ ಮತದ ಮೇಲೆ ಕುತೂಹಲ ಮನೆ ಮಾಡಿತ್ತು. ಪುರುಷ ಅಭ್ಯರ್ಥಿಗಳ ವಿಭಾಗದಲ್ಲಿ ಕೆ. ರವಣಪ್ಪ 323 ಮತಗಳನ್ನು ಪಡೆಯುವ ಮೂಲಕ ಅತ್ಯಧಿಕ ಮತಗಳೊಂದಿಗೆ ಪ್ರಥಮ ಸ್ಥಾನ ಗಳಿಸಿದ್ದಾರೆ. ಉಳಿದಂತೆ ಸಿ. ಮಂಜುನಾಥ್ 310 ಮತಗಳನ್ನು, ಕೆ. ಶಿವರಾಜ 306 ಮತಗಳನ್ನು ಹಾಗೂ ಬಣದ ನೇತೃತ್ವ ವಹಿಸಿದ್ದ ಆರ್. ಅಶೋಕ ಕುಮಾರ್305 ಮತಗಳನ್ನು ಪಡೆಯುವ ಮೂಲಕ ಭರ್ಜರಿ ಜಯ ಸಾಧಿಸಿದ್ದಾರೆ. ಇವರೊಂದಿಗೆ ಮುಸ್ತಾನ್‌ವಲಿ 288, ಎಂ.ವಿ.ಜಯದೇವ 269, ಎನ್. ದಾಮೋದರರೆಡ್ಡಿ 243, ವಿ. ರಮೇಶ್ 235 ಮತ್ತು ಕೆ.ಎನ್.ವಸಂತರಡ್ಡಿ 230 ಅವರು ಮತಗಳನ್ನು ಪಡೆದಿದ್ದಾರೆ.

ಮಹಿಳಾ ಅಭ್ಯರ್ಥಿಗಳ ವಿಭಾಗದಲ್ಲೂ ಅಶೋಕ್ ಕುಮಾರ್‌ಬಣದ ಮಹಿಳೆಯರು ಪಾರುಪತ್ಯ ಮೆರೆದಿದ್ದಾರೆ. ಎನ್. ಮಂಜುಳಾದೇವಿ 311 ಮತ ಪಡೆಯುವ ಮೂಲಕ ಮಹಿಳಾ ವಿಭಾಗದಲ್ಲಿ ಅಗ್ರಸ್ಥಾನಿಯಾಗಿದ್ದಾರೆ. ಎಂ. ನಾಗರತ್ನಮ್ಮ 306 ಮತಗಳನ್ನು, ಕೆ.ಸಿ. ಚಂದ್ರಮ್ಮ 298 ಮತಗಳನ್ನು ಹಾಗೂ ಎನ್.ಕೆ. ಮಂಜುಳಾಕುಮಾರಿ 270 ಮತಗಳನ್ನು ಪಡೆದು ಯಶಸ್ವಿನ ಮುನ್ನುಡಿ ಬರೆದಿದ್ದಾರೆ.

ನ್ಯಾಯಾಧೀಶರಿಂದ ಕೆರೆ ಅಂಗಳದಲ್ಲಿ ಗಿಡ ನೆಡುವ ಕಾರ್ಯಕ್ರಮ

ಕೆಜಿಎಫ್: ಇಂದು ಮನುಷ್ಯ ತನ್ನ ಸ್ವಾರ್ಥಕ್ಕಾಗಿ ಪ್ರಕೃತಿಯನ್ನೇ ನಾಶ ಮಾಡುತ್ತಿದ್ದಾನೆ. ಹೀಗಾಗಿ ಪ್ರಕೃತಿ ಮಾತೆಯ ರಕ್ಷಣೆ ಮಾಡಬೇಕು. ಭವಿಷ್ಯಕ್ಕಾಗಿ ಪರಿಸರವನ್ನು ಉಳಿಸಬೇಕು, ಗಿಡ-ಮರಗಳನ್ನು ನೆಟ್ಟು ಪರಿಸರವನ್ನು ನಾವೆಲ್ಲರೂ ಉಳಿಸಿ ಬೆಳೆಸೋಣ ಎಂದು 3ನೇ ಅಪರ ಜಿಲ್ಲಾ ಸತ್ರ ನ್ಯಾಯಾಧೀಶ ಶಿವಕುಮಾರ್ ಬಿ. ತಿಳಿಸಿದರು.

ಗುಡ್ ಡೀಡ್ಸ್ ಡೇ ದಿನದ ಅಂಗವಾಗಿ ಬೆಳಕು ಟ್ರಸ್ಟ್, ತಂಬರಹಳ್ಳಿ ಹಾಗೂ ಗೊಲ್ಲಹಳ್ಳಿ ಗ್ರಾಪಂ ಸಹಯೋಗದಲ್ಲಿ ಕೆರೆ ಅಂಗಳದಲ್ಲಿ ಸಸಿ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ಈ ದಿನದ ಮಹತ್ವದಬಗ್ಗೆತಿಳಿಸಿದನ್ಯಾಯಾಧೀಶರು, ಒಳ್ಳೆಯದನ್ನು ಯೋಚಿಸಿ, ಒಳ್ಳೆಯದನ್ನು ಮಾತನಾಡಿ ಮತ್ತು ಒಳ್ಳೆಯದನ್ನು ಮಾಡಿ ಎಂಬ ಸಂದೇಶ ನೀಡುವುದು ಈ ದಿನದ ವಿಶೇಷವಾಗಿದೆ ಎಂದರು.

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರಾದ ಮುಜಫರ್‌ಎ. ಮಂಜರಿ ಮಾತನಾಡಿ, ಜಗತ್ತಿನಲ್ಲಿ ನಮ್ಮ ಎಲ್ಲಾ ಇಚ್ಛೆಗಳು ನೆರವೇರುವುದಿಲ್ಲ. ದೈವೇಚ್ಛೆಯಿಂದ ಜೀವನ ಸಾಗಲಿದೆ. ಹಣ, ಆಸ್ತಿ, ಸಂಪತ್ತು ಎಷ್ಟೇ ಇದ್ದರೂ ಕೂಡ ಒಂದಲ್ಲಾ ಒಂದು ಚಿಂತೆಯಲ್ಲಿಯೇ ಮನುಷ್ಯರ ಬದುಕು ಸಾಗಿಸುತ್ತಿರುವ ಪ್ರಸ್ತುತ ದಿನಮಾನಗಳಲ್ಲಿ ಎದೆಯೊಳಗೆ ಸಂತೋಷ ಇರುವವನೇ ಯಶಸ್ವಿ ಪುರುಷ ಎನ್ನುವ ಸತ್ಯವನ್ನು ಅರಿತು ಮನುಷ್ಯ ಬದುಕಬೇಕು ಎಂದರು.

ಅಪರ ಹಿರಿಯ ನ್ಯಾಯಾಧೀಶರಾದ ಜಯಲಕ್ಷ್ಮೀ ಎನ್.ಬಿ., ಸಿವಿಲ್ ನ್ಯಾಯಾಧೀಶರಾದ ಶಮಿದ ಕೆ., ವಕೀಲರ ಸಂಘದ ಅಧ್ಯಕ್ಷರಾದ ಎಸ್.ಎನ್. ರಾಜಗೋಪಾಲಗೌಡ, ಜೆ.ಜೆ.ನಾಗರಾಜ್, ಲೋಕೇಶ್‌ಆನಂದ್, ವೃತ್ತ ನೀರಿಕ್ಷಕ ರಂಗಶಾಮಯ್ಯ, ಪಿಡಿಒ ಶ್ರೀನಿವಾಸಮೂರ್ತಿ ಟಿ.ಕೆ. ಪರಿಸರದ ಕುರಿತು ಮಾತನಾಡಿದರು. ಬೆಳಕು ಟ್ರಸ್ಟ್‌ನ ರಾಧಮಣಿ ಇದ್ದರು.


ಕೆರೆಯಲ್ಲಿ ಗಿಡಗಳನ್ನು ನಡುವ ಮೂಲಕ ಗುಡ್ ಡೀಡ್ಸ್ ಡೇಗೆ ಚಾಲನೆ ನೀಡಲಾಯಿತು.

ಮಾಲೂರು ತಾಲೂಕು ಶಾಲಾ ಶಿಕ್ಷಕರ ಸಂಘದ ಕಾರ್ಯಕಾರಿ ಸಮಿತಿಗೆ ಆಯ್ಕೆ


ಮಾಲೂರು ನಗರದ ಸಪಪೂಕಾ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಪ್ರಾಥಮಿಕ ಶಾಲಾಶಿಕ್ಷಕರ ಸಂಘದ ತಾಲೂಕು ಕಾರ್ಯಕಾರಿ ಸಮಿತಿಗೆ ರವಿಕುಮಾರ್ ಬಣದಿಂದ ಗೆಲುವು ಸಾಧಿಸಿದ ಸದಸ್ಯರನ್ನು ಅವರ ಅಭಿಮಾನಿಗಳು ಅಭಿನಂದಿಸಿದರು.

ಮಾಲೂರು: ಪ್ರಾಥಮಿಕ ಶಾಲಾ ಶಿಕ್ಷಕರ ತಾಲೂಕು ಸಂಘದ ಸಾಮಾನ್ಯ 9 ಮಹಿಳಾ ಮೀಸಲು 5 ಕಾರ್ಯಕಾರಿ ಸಮಿತಿ ಸದಸ್ಯರ 5 ವರ್ಷಗಳ ಅವಧಿಗೆ ನಡೆದ ಚುನಾವಣೆಯಲ್ಲಿ ಜಿಲ್ಲಾ ಸಂಘದ ಸಂಘಟನಾ ಕಾರ್ಯದರ್ಶಿ ರವಿಕುಮಾರ್‌ಬಣದ ಶಿಕ್ಷಕ ಅಭ್ಯರ್ಥಿಗಳು 14 ಸ್ಥಾನಗಳಲ್ಲಿ 13 ಸ್ಥಾನಗಳಲ್ಲಿ ಜಯ ಗಳಿಸುವುದರ ಮೂಲಕ ಸಂಘದ ಆಡಳಿತ ಚುಕ್ಕಾಣಿ ಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ.

ಕರ್ನಾಟಕ ರಾಜ್ಯ ಪ್ರಾ.ಶಾ.ಶಿ.ಸಂ ತಾಲೂಕು ಕಾರ್ಯಕಾರಿ ಸಮಿತಿಯ 9 ಸಾಮಾನ್ಯ ಸ್ಥಾನಗಳಿಗೆ 17 ನಾಮಪತ್ರಗಳನ್ನು ಸಲ್ಲಿಸಿದ್ದರು. 5 ಮಹಿಳಾ ಸ್ಥಾನಗಳಿಗೆ 7ಮಂದಿ ಶಿಕ್ಷಕಿಯರು ನಾಮಪತ್ರಗಳನ್ನು ಸಲ್ಲಿಕೆ ಮಾಡಿದ್ದು, ಶುಕ್ರವಾರ ನಡೆದ ಚುನಾವಣೆಯಲ್ಲಿ, ರವಿಕುಮಾರ್‌ಬಣದಿಂದ ಸ್ಪರ್ಧಿಸಿದ್ದ ಸಾಮಾನ್ಯ 9 ಸ್ಥಾನಗಳಿಗೆ 9 ಮಂದಿ ಶಿಕ್ಷಕರು ಸ್ಪರ್ಧಿಸಿ ರವಿಕುಮಾರ್‌ಕೆ (481) ಮತಗಳು ಎಂಜಿ ನಾಗರಾಜ (412) ನಂದೀಶ್ವರ ಎ (405), ಸಿಎಂ ನಾರಾಯಣಸ್ವಾಮಿ (389), ಮುನಿಯಪ್ಪ ಜಿ (381), ಶಶಿಧರ ಕೆ (378), ಸುರೇಶ ಕುಮಾರ್‌ಕೆ (321), ಶ್ರೀನಾಥ್ ಹೆಚ್ ವಿ (347), ಮತಗಳನ್ನು ಪಡೆದು ಒಂಬತ್ತು ಸದಸ್ಯ ಸ್ಥಾನಗಳಲ್ಲಿ 9 ಸದಸ್ಯರು ಜಯಭೇರಿ ಗಳಿಸಿದ್ದಾರೆ.

ಮಹಿಳಾ ಮೀಸಲಿನಿಂದ 5 ಸ್ಥಾನಗಳಿಗೆ ರವಿಕುಮಾರ್‌ಬಣದಿಂದ 5 ಮಂದಿ ಸ್ಪರ್ಧಿಸಿ 4 ಸ್ಥಾನಗಳಲ್ಲಿ ಜಯ ಗಳಿಸಿದ್ದಾರೆ, ಲಕ್ಷ್ಮಿ ಎನ್ (529), ಕಾಂತಮ್ಮ ವಿ (432), ಕಾಂತಮ್ಮ ವಿ (422), ಕೆ. ಚಂದ್ರಕಲಾ (388), ಮತಗಳನ್ನು ಪಡೆದು ವಿಜೇತರಾದರೆ. ಪ್ರಾ.ಶಾ.ಶಿ.ಸಂ. ನಿಕಟಪೂರ್ವ ಅಧ್ಯಕ್ಷ ಆರ್‌ನರಸಿಂಹ ಬಣದಿಂದ ಮಹಿಳಾ ಮೀಸಲು ಕ್ಷೇತ್ರದಿಂದ ರಾಜಮ್ಮ ಎಲ್‌ಕೆ (311) ಮತಗಳು ಪಡೆದು ಜಯ ಗಳಿಸಿದ್ದಾರೆ.

ಜಾತ್ರಾ ಮಹೋತ್ಸವ | ಅಪಾರ ಜನಸ್ತೋಮದ ನಡುವೆ ಶ್ರದ್ಧಾಭಕ್ತಿಯ ಕರಗ | ಪೂಜೆ ಸಲ್ಲಿಸಿ ಹರಕೆ ತೀರಿಸಿದ ಸುಮಂಗಲಿಯರು

ಬಂಗಾರಪೇಟೆಯಲ್ಲಿ ವಿಜೃಂಭಣೆಯ ಹೂವಿನ ಕರಗ ಮಹೋತ್ಸವ

• **ಕನ್ನಡಪ್ರಭ ವಾರ್ತೆ** ಬಂಗಾರಪೇಟೆ

ನಗರದಲ್ಲಿ 80ನೇ ವರ್ಷದ ಶ್ರೀ ಧರ್ಮರಾಯಸ್ವಾಮಿ ಕರಗ ಮಹೋತ್ಸವ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ಅದ್ಧೂರಿಯಾಗಿ ನೆರವೇರಿತು.

ನಗರದ ಇತಿಹಾಸ ಪ್ರಸಿದ್ಧ ಶ್ರೀ ದ್ರೌಪತಮ್ಮ ಧರ್ಮರಾಯಸ್ವಾಮಿ ಕರಗ ಜಿಲ್ಲೆಯಲ್ಲಿ ಬಹಳ ಪ್ರಸಿದ್ಧಿಯನ್ನು ಪಡೆದಿದ್ದು, ಪ್ರತಿ ವರ್ಷದಂತೆ ಈ ವರ್ಷವು ಸಹ ಅಪಾರ ಜನಸ್ತೋಮದ ನಡುವೆ ಶ್ರದ್ಧಾಭಕ್ತಿಯಿಂದ ನಡೆಯಿತು. ಶನಿವಾರ ರಾತ್ರಿ ಸುಮಾರು 10 ಕ್ಕೆ ಹೂವಿನ ಕರಗ ದೇವಾಲಯದಿಂದ ಹೊರಬರುತ್ತಿದ್ದಂತೆ ಕತ್ತಿಯನ್ನು ಹಿಡಿದಿದ್ದ ವೀರಕುಮಾರರು ಗೋವಿಂದ ಘೋಷಣೆಗಳನ್ನು ಕೂಗುತ್ತಾ ಬರಮಾಡಿಕೊಂಡರು.

ಮಲ್ಲಿಗೆ ಹೂವಿನಿಂದ ಅಲಂಕೃತವಾದ ಕರಗವನ್ನು ಹೊತ್ತಿದ್ದ ಪೂಜಾರಿ ಬೇತಮಂಗಲ ಕೃಷ್ಣಮೂರ್ತಿ ದೇವಾಲಯದ ಮುಂಭಾಗ ಹಾಕಿದ್ದ ಬೃಹತ್ ವೇದಿಕೆಯಲ್ಲಿ ತಮಟೆ ನಾದಕ್ಕೆ ವಿವಿಧ ಭಂಗಿಗಳಲ್ಲಿ ನರ್ತಿಸುತ್ತಾ ಪ್ರೇಕ್ಷಕರನ್ನು ರಂಜಿಸಿದರು. ವೇದಿಕೆಯಿಂದ ಹೊರಟ ಕರಗವು ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿದಾಗ ನಗರದ ಸುಮಂಗಲಿಯರು ಕರಗಕ್ಕೆ ಮಲ್ಲಿಗೆಯನ್ನು ಚೆಲ್ಲಿ ಪೂಜೆ ಸಲ್ಲಿಸಿ ಮಡಿಲು ತುಂಬಿಸಿ ಹರಕೆಯನ್ನು ತೀರಿಸಿದರು.

ಕರಗ ನೋಡಲು ಆಂಧ್ರ ಮತ್ತು ತಮಿಳು ನಾಡಿನಿಂದಲೂ ಸಹ ಜನರು ಆಗಮಿಸಿದ್ದರು. ಕರಗವನ್ನು ಕಣ್ತುಂಬಿಕೊಳ್ಳಲು ವೇದಿಕೆ ಸುತ್ತಲೂ ಇದ್ದಂತಹ ಕಟ್ಟಡಗಳ ಮೇಲೆ ಜನರು ನಿಂತಿದ್ದ ದೃಶ್ಯಗಳು ಕಂಡುಬಂದಿತ್ತು.

ಸಂಸದ ಮಲ್ಲೇಶ್ ಬಾಬು ಮಾತನಾಡಿ, ಧರ್ಮರಾಯಸ್ವಾಮಿ ಸಮಿತಿ ಪ್ರತಿ ವರ್ಷವೂ ಸಹ ಕರಗವನ್ನು ಬಹಳ ಅದ್ಧೂರಿಯಾಗಿ ಆಚರಿಸಿಕೊಂಡು ಬರಲಾಗುತ್ತದೆ. ಜಿಲ್ಲೆಯಲ್ಲಿ ನಡೆಯುವ ಕರಗಗಳಲ್ಲಿ ಕಡೆಯ ಕರಗ ಬಂಗಾರಪೇಟೆಯಲ್ಲಿ ನಡೆಯುವುದು ವಿಶೇಷತೆಯಿಂದ ಕೂಡಿದೆ ಎಂದರು.

ಶಾಸಕ ಎಸ್.ಎನ್. ನಾರಾಯಣಸ್ವಾಮಿ ಮಾತನಾಡಿ, ಬಂಗಾರಪೇಟೆ ಕರಗವು ಜಿಲ್ಲೆ ಮಾತ್ರವಲ್ಲದೆ ನೆರೆಯ ರಾಜ್ಯಗಳಲ್ಲಿ ಸಹ ಖ್ಯಾತಿಯನ್ನು ಪಡೆದಿದೆ. ತಾಯಿ ದ್ರೌಪದಮ್ಮ ಶಕ್ತಿ ದೇವತೆಯ ಮಹಾತ್ಮೆಯಿಂದ ಕರಗ ಹೊತ್ತುವ ಪೂಜಾರಿ 24 ಗಂಟೆಗಳ ಕಾಲ ವಿಶ್ರಾಂತಿ ಪಡೆಯದೆ ಕರಗವನ್ನು ಹೊತ್ತು ನಗರವನ್ನು ತಿರುಗುತ್ತಾರೆ. ಇದೊಂದು ರೀತಿಯ ದೇವರ ಪವಾಡ. ಸರ್ಕಾರ ರಾಜ್ಯದಲ್ಲಿ ನಡೆಯುವ ಕರಗ ಮಹೋತ್ಸವಕ್ಕೆ 3 ಕೋಟಿ ರು.ಗಳ ಅನುದಾನವನ್ನು ನೀಡಿದೆ. ಜೊತೆಗೆ ಪ್ರತಿ ದೇವಾಲಯಕ್ಕೆ 3 ಲಕ್ಷದಂತೆ ಹಣನೀಡಲಾಗುತ್ತಿದ್ದು, ತಿಗಳಸಮುದಾಯದ ಏಳಿಗೆಗಾಗಿ ಸರ್ಕಾರ ಒತ್ತು ನೀಡಿದೆ. ಸಮುದಾಯದ ನಿಗಮಕ್ಕೆ ಎಲೆ ಮಂಜುನಾಥರನ್ನು ಅಧ್ಯಕ್ಷರನ್ನಾಗಿ ಮಾಡಿ ತಿಗಳ ಸಮುದಾಯದ ಅಭಿವೃದ್ಧಿಗೆ 10 ಕೋಟಿ ರು.ಗಳನ್ನು ಮೀಸಲಿಡಲಾಗಿದೆ ಎಂದರು.

ಮಾಜಿ ಸಂಸದ ಎಸ್.ಮುನಿಸ್ವಾಮಿ, ತಿಗಳ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಲ್.ಎ. ಮಂಜುನಾಥ, ಕನ್ನಡ ಸಂಘದ ಅಧ್ಯಕ್ಷ ಪಲ್ಲವಿ ಮಣಿ, ಮಾಜಿ ಪುರಸಭೆ ಸದಸ್ಯ ಕಪಾಲಿ ಶಂಕರ್, ಚಿನ್ನಿ ವೆಂಕಟೇಶ್, ವರ್ತೂರು ಸಂತೋಷ್ ಇತರರು ಇದ್ದರು.


ಬಂಗಾರಪೇಟೆಯಲ್ಲಿ ಹೂವಿನ ಕರಗ ಮಹೋತ್ಸವ ಸಡಗರದಿಂದ ನಡೆಯಿತು.

ಸುದ್ದಿ ಸಿಂಚನ

ಹಿಜಾಬ್ ಧರಿಸಿದ್ದಕ್ಕಾಗಿ ಸಿಇಟಿ ಬರೆಯಲು ಅವಕಾಶ ನಿರಾಕರಣೆ

ವಿದ್ಯಾರ್ಥಿನಿ ತಂದೆಯಿಂದ ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ದೂರು

ಚಿಕ್ಕಬಳ್ಳಾಪುರ: ನಗರ ಹೊರವಲಯದ ಬಿಜಿಎಸ್ ಸೈನ್ಸ್ ಅಕಾಡೆಮಿಯಲ್ಲಿ ನಡೆದ ಸಿಇಟಿ ಪರೀಕ್ಷೆಯಲ್ಲಿ ಹಿಜಾಬ್ ಧರಿಸಿದ್ದ ವಿದ್ಯಾರ್ಥಿನಿಗೆ ಪರೀಕ್ಷೆ ಬರೆಯಲು ಅವಕಾಶ ನಿರಾಕರಿಸಲಾಗಿದೆ ಎಂಬ ಗಂಭೀರ ಆರೋಪ ಕೇಳಿ ಬಂದಿದೆ. ಪರೀಕ್ಷೆ ಬರೆಯಲು ಅವಕಾಶ ನಿರಾಕರಿ ಸಿದ ಕಾರಣ, ವಿದ್ಯಾರ್ಥಿನಿಯ ತಂದೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ (ಕೆಇಎ) ಲಿಖಿತ ದೂರನ್ನು ಸಲ್ಲಿಸಿದ್ದಾರೆ. ದೂರಿನ ಆಧಾರದ ಮೇಲೆ ಘಟನೆಯ ಕುರಿತು ತನಿಖೆ ನಡೆಸುವಂತೆ ಈಗಾಗಲೇ ಸೂಚನೆ ನೀಡಲಾಗಿದೆ. ತನಿಖಾ ವರದಿಯನ್ನು ಶೀಘ್ರವಾಗಿ ಸಲ್ಲಿಸುವಂತೆ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ. ಈ ಪ್ರಕರಣದ ಕುರಿತು ತನಿಖಾ ತಂಡವು ವಿದ್ಯಾರ್ಥಿನಿ, ಆಕೆಯ ತಂದೆ ಮತ್ತು ಪರೀಕ್ಷಾ ಕೇಂದ್ರದ ಪ್ರಾಂಶುಪಾಲರನ್ನು ವಿಚಾರಣೆಗೊಳಪಡಿಸಿದೆ. ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್‌ಅವರು ಈ ಘಟನೆಯನ್ನು ಗಂಭೀರವಾಗಿ ಪರಿಗಣಿಸಿದ್ದು, ಸೂಕ್ತ ಕ್ರಮವನ್ನು ಕೈಗೊಳ್ಳುವುದಾಗಿ ಭರವಸೆ ನೀಡಿದ್ದಾರೆ. ಕಳೆದ 23 ರಂದು ನಡೆದ ಸಿಇಟಿ ಪರೀಕ್ಷೆಯಲ್ಲಿ ನಮ್ಮ ಜಿಲ್ಲೆಯಲ್ಲೆ ಓರ್ವ ವಿದ್ಯಾರ್ಥಿಯಿಂದ ಜನಿವಾರ ತಗೆಯೋವರೆಗೂ ಪರೀಕ್ಷಾ ಕೇಂದ್ರಕ್ಕೆ ಬಿಡದೆ ಇದ್ದಿದ್ದು, ಹಿಜಾಬ್ ಧರಿಸಿದ್ದಕ್ಕಾಗಿ ಸಿಇಟಿ ಬರೆಯಲು ಅವಕಾಶ ಕಾನಿರಾಕರಣೆ ಮಾಡಿದ್ದು, ವಿದ್ಯಾರ್ಥಿನಿಯ ತಂದೆಯಿಂದ ದೂರು ದಾಖಲುಲಾಗಿ, ಭಾರಿ ಆಕ್ರೋಶಕ್ಕೆ ಕಾರಣವಾಗಿದೆ.

ಮೇಲೂರು ಗ್ರಾಪಂನಲ್ಲಿ ಬೇಸಿಗೆ ಶಿಬಿರಕ್ಕೆ ಚಾಲನೆ



ಶಿಡ್ಲಘಟ್ಟ: ಬೇಸಿಗೆ ಶಿಬಿರಗಳನ್ನು ಮಕ್ಕಳು ಸದುಪಯೋಗ ಮಾಡಿಕೊಂಡು, ಉತ್ತಮ ಕಲಿಕೆಯತ್ತ ಗಮನ ಹರಿಸಬೇಕು ಎಂದು ಮೇಲೂರು ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಪಿ.ಎನ್.ಶ್ರೀನಿವಾರೆಡ್ಡಿ ಹೇಳಿದರು. ತಾಲೂಕಿನ ಮೇಲೂರು ಗ್ರಾಮ ಪಂಚಾಯಿತಿ ಕಾರ್ಯಾಲಯದಲ್ಲಿ ಅರಿವು ಕೇಂದ್ರ, ಡಿಜಿಟಲದ ಗ್ರಂಥಾಲಯದ ವತಿಯಿಂದ ಆಯೋಜಿಸಿದ್ದ ಮಕ್ಕಳ ಬೇಸಿಗೆ ಶಿಬಿರ-2026ನ್ನು ಉದ್ಘಾಟನೆ ಮಾಡಿ ಅವರು ಮಾತನಾಡಿದರು. ಬೇಸಿಗೆಯಲ್ಲಿ ಬಿಸಿಲಿನ ತಾಪಮಾನ ಹೆಚ್ಚಾಗಿರುವ ಕಾರಣ, ಪೋಷಕರು ಮಕ್ಕಳನ್ನು ಬೇಸಿಗೆ ಶಿಬಿರಕ್ಕೆ ಕಳುಹಿಸುವ ಮೂಲಕ ಅವರ ಆರೋಗ್ಯವನ್ನು ಸುಧಾರಣೆ ಮಾಡುವುದರ ಜೊತೆಗೆ, ಅವರು ಪಠ್ಯೇತರ ಚಟುವಟಿಕೆಗಳಲ್ಲಿ ಹೆಚ್ಚು ತೊಡಗಿಕೊಳ್ಳುವಂತೆ ಗಮನಹರಿಸಬೇಕು ಎಂದರು. ಪಿಡಿಒ ದ್ಯಾವಪ್ಪ ಇದ್ದರು.

ಕುಡಿಯುವ ನೀರಿಗೆ ಸಮಸ್ಯೆಯಾಗಬಾರದು



ಬೇತಮಂಗಲ: ಕಳೆದ ಹಲವು ವರ್ಷಕ್ಕೆ ಹೋಲಿಸಿದರೆ ಈ ಬಾರಿ ಬಿಸಿಲಿನ ತಾಪಮಾನ ಹೆಚ್ಚಾಗಿದೆ. ಸಾರ್ವಜನಿಕರು ಕಲುಷಿತ ನೀರನ್ನು ಸೇವಿಸುವುದರಿಂದ ವಿವಿಧ ರೀತಿಯ ಖಾಯಿಲೆಗಳು ಹರಡುವ ಸಾಧ್ಯತೆ ಇದ್ದು, ಶುದ್ಧ ಕುಡಿಯುವ ನೀರು ಬಳಸಬೇಕೆಂದು ಗ್ರಾಪಂ ಆಡಳಿತ ಅಧಿಕಾರಿ ಡಾ.ತ್ರಿಮೂರ್ತಿ ನಾಯಕ್ ಹೇಳಿದರು. ಜಕ್ಕರಸನಕುಪ್ಪ ಗ್ರಾಪಂ ವ್ಯಾಪ್ತಿಯ ಮರದಘಟ್ಟುನಲ್ಲಿ ಕುಡಿಯುವ ನೀರಿನ ಆದಾಲತ್ ಕಾರ್ಯಕ್ರಮದಲ್ಲಿ ಮಾತನಾಡಿ, ಕಲುಷಿತ ನೀರು ಸೇವಿಸುವುದರಿಂದ ಕಾಲರ, ಮಲೇರಿಯಾ, ಟೈಫಾಯ್ಡ್, ಅತಿಸಾರ ಬೇಧಿಯಂತಹ ಖಾಯಿಲೆಗಳು ಹರಡುವ ಸಾಧ್ಯತೆ ಇರುವುದರಿಂದ ಸಾರ್ವಜನಿಕರು ಎಚ್ಚರಿಕೆಯಿಂದ ಇರಬೇಕೆಂದರು. ಗ್ರಾಪಂ ಮಟ್ಟದಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾದಾಗ ಅಥವಾ ನೀರಿನ ಪೂರೈಕೆಯಲ್ಲಿ ವ್ಯತ್ಯಾಸ ಸಂಭವಿಸಿದಲ್ಲಿ ತಕ್ಷಣ ಗ್ರಾಪಂ ಕಚೇರಿಯಲ್ಲಿ ತೆರೆದಿರುವ ಸಹಾಯವಾಣಿಗೆ ಸಾರ್ವಜನಿಕರು ಕರೆ ಮಾಡಿ ಸೌಲಭ್ಯ ಪಡೆದುಕೊಳ್ಳಬೇಕು ಎಂದು ಕರೆ ನೀಡಿದರು. ಗ್ರಾಪಂ ಪಿಡಿಒ ಕೋದಂಡರಾಮ್ ಮಾತನಾಡಿ, ಸಾರ್ವಜನಿಕರು ಮನೆಗಳಲ್ಲಿ ಬಟ್ಟೆ, ಪಾತ್ರೆ, ತರಕಾರಿ ತೊಳೆದ ನೀರು ಗಿಡಗಳಿಗೆ ಹಾಕಿ ನೀರು ಉಳಿತಾಯ ಮಾಡಬೇಕು. ನೀರು ಮಿತವಾಗಿ ಬಳಸಿ, ಶುದ್ಧ ನೀರು ಕುಡಿಯಿರಿ, ಉತ್ತಮ ಆರೋಗ್ಯದ ಕಡೆ ಗಮನ ಹರಿಸಿ, ಸಹಾಯವಾಣಿ 98809 49840, 83104 28698 ಸಾರ್ವಜನಿಕರು ಕರೆ ಮಾಡಬಹುದು ಎಂದು ಹೇಳಿದರು. ಕರ ವಸಲಿಗಾರ ಶಶಿಕುಮಾರ್, ಶ್ರೀನಿವಾಸ್ ಇದ್ದರು.

ದ್ರಾಕ್ಷಿಗೆ ಬಂಪರ್ ಬೆಲೆ: ರೈತರ ಮೊಗದಲ್ಲಿ ಹರ್ಷ

ದಿಲ್ ಖುಷ್ ದ್ರಾಕ್ಷಿಗೆ ಮಾರುಕಟ್ಟೆಯಲ್ಲಿ ಉತ್ತಮ ಬೆಲೆ | ತೋಟಗಳಿಗೆ ಭೇಟಿ ನೀಡಿ ಮುಂಗಡ ಖರೀದಿಗೆ ಇಳಿದ ವ್ಯಾಪಾರಸ್ಥರು

• **ಕನ್ನಡಪ್ರಭ ವಾರ್ತೆ** ಚಿಕ್ಕಬಳ್ಳಾಪುರ

ಈ ಬಾರಿ ದ್ರಾಕ್ಷಿಗೆ ಬಂಗಾರದಂಥ ಬೆಲೆ ಬರುವ ನಿರೀಕ್ಷೆ ಇದ್ದು, ವ್ಯಾಪಾರಸ್ಥರು ದ್ರಾಕ್ಷಿ ಬೆಳೆಗಾರರ ತೋಟಗಳಿಗೆ ಭೇಟಿ ನೀಡಿ ಮುಂಗಡ ಖರೀದಿಗೆ ಇಳಿದಿದ್ದಾರೆ.

ಕೆಲವು ತಳಿ ದ್ರಾಕ್ಷಿಗೆ ಮಿತಿಮೀರಿದ ಬೇಡಿಕೆ ಸೃಷ್ಟಿಯಾಗಿದ್ದು, ದ್ರಾಕ್ಷಿಗೆ ಒಳ್ಳೆಯ ಬೆಲೆ ಬಂದಿದೆ. ಕಳೆದ ಬಾರಿ ಬೆಲೆ ಕುಸಿತದಿಂದ ಕಂಗಾಲಾಗಿದ್ದ ಜಿಲ್ಲೆಯ ಬೆಳೆಗಾರರಿಗೆ ಈ ಬಾರಿ ದ್ರಾಕ್ಷಿ ಬೆಳೆ ಕೈ ಹಿಡಿದಿದೆ. ಅದರಲ್ಲೂ ದಿಲ್ ಖುಷ್ ದ್ರಾಕ್ಷಿಗೆ ಮಾರುಕಟ್ಟೆಯಲ್ಲಿಉತ್ತಮಬೆಲೆಸಿಗುತ್ತಿರುವುದರಿಂದ ಬೆಳೆಗಾರರ ಮೊಗದಲ್ಲಿ ಹರ್ಷ ಕಂಡು ಬಂದಿದೆ.

ಇತ್ತೀಚಿನ ವರ್ಷಗಳಲ್ಲಿ ದ್ರಾಕ್ಷಿ ಬೆಲೆ ತೀವ್ರ ಕುಸಿತದಿಂದ ರೈತರೇ ವರ್ತಕರ ಬಳಿ ಹೋಗಿ ದ್ರಾಕ್ಷಿ ಕಟಾವಿಗೆ ಗೊಗರೆಯಬೇಕಾಗಿತ್ತು. ಆದರೆ ಈ ಬಾರಿ ಮಾತ್ರ ವರ್ತಕರೇ ಬೆಳೆಗಾರರನ್ನು ನಾವೇ ಕಟಾವು



ದಿಲ್‌ಕುಷ್ ದ್ರಾಕ್ಷಿ

ಎಂದು ಹೇಳುತ್ತಿದ್ದಾರೆ. ಸತತ ಬೆಲೆ ಇಳಿಕೆಯಿಂದ ಕಂಗಾಲಾಗಿದ್ದ ರೈತರು ಈ ಬಾರಿ ಉತ್ತಮ ಬೆಲೆ ಕಂಡು ಸಂತಸಗೊಂಡಿದ್ದಾರೆ.

ರಾಜ್ಯದಲ್ಲಿ ಸುಮಾರು 20 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ದ್ರಾಕ್ಷಿ ಬೆಳೆಯಲಾಗುತ್ತದೆ. ಹೆಚ್ಚಾಗಿ ಏಪ್ರಿಲ್, ಮೇ ಮತ್ತು ಜೂನ್ ತಿಂಗಳಲ್ಲಿ ಅತಿ ಹೆಚ್ಚು ದ್ರಾಕ್ಷಿ ಕಟಾವಿಗೆ ಬರಲಿದೆ. ನೆರೆಯ ರಾಜ್ಯಗಳಿಗೆ ಬಹುಪಾಲು ದ್ರಾಕ್ಷಿ ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ವಿಜಯಪುರ, ಬೆಳಗಾವಿ ಜಿಲ್ಲೆಗಳಿಂದ ಮಾರಾಟವಾಗುತ್ತದೆ.

ದ್ರಾಕ್ಷಿ ಬೆಳೆಯುವುದರಲ್ಲಿ ರಾಜ್ಯದ ಗಮನ ಸೆಳೆದಿರುವ ಚಿಕ್ಕಬಳ್ಳಾಪುರ ತಾಲೂಕಿನಲ್ಲಿ ಸದ್ಯ ಸಾವಿರಾರು ಹೆಕ್ಟೇರ್ ಪ್ರದೇಶದಲ್ಲಿ ಹೂ, ಹಣ್ಣು, ತರಕಾರಿ ಬೆಳೆದಂತೆ ದ್ರಾಕ್ಷಿ ಬೆಳೆ ಕೂಡ ಬೆಳೆಯಲಾಗುತ್ತಿದೆ. ವಿವಿಧ ತಳಿಯ ದ್ರಾಕ್ಷಿ ಕೆಜಿ 40 ರಿಂದ ಹಿಡಿದು 140 ರು.ವರೆಗೂ ಮಾರಾಟ ಆಗುತ್ತಿವೆ. ಈಗಾಗಲೇ ಜಿಲ್ಲೆಯಲ್ಲಿ ಇರಾನ್ ಹಾಗೂ ಅಮೆರಿಕ ಮತ್ತು ಇಸ್ರೇಲ್ ನಡುವಿನ ಯುದ್ಧದ ಪರಿಣಾಮ ರೈತರು ಬೆಳೆದ ಆಲೂಗಡ್ಡೆ ಹಾಗೂ ಬೆಂಗಳೂರು ಗುಲಾಬಿ ಈರುಳ್ಳಿ ವಿದೇಶಗಳಿಗೆ ರಫ್ತು ಆಗದೇ ಬೆಲೆ ಕುಸಿತದಿಂದ ಕಂಗಾಲಾಗಿದ್ದಾರೆ.

ಆದರೆ ದ್ರಾಕ್ಷಿಗೆ ಮಾರುಕಟ್ಟೆಯಲ್ಲಿ ಉತ್ತಮ ದರ ಸಿಗುತ್ತಿರುವುದು ದ್ರಾಕ್ಷಿ ಬೆಳೆಗಾರರು ನೆಮ್ಮದಿಯ ನಿಟ್ಟುಸಿರು ಬಿಡುವಂತಾಗಿದೆ. ಕಳೆದ ವರ್ಷ ದಿಲ್ ಖುಷ್ ಕೆಜಿ 25, 30 ರು.ಗೆ ಮಾರಾಟಗೊಂಡಿತ್ತು. ಆದರೆ ಈ ವರ್ಷ ಕೆಜಿ 40 ರು.ಗೆ ಮಾರಾಟ ಆಗುತ್ತಿದೆ. ಸದ್ಯ ಸಿಗುತ್ತಿರುವ ಬೆಲೆ ರೈತರಿಗೆ ಲಾಭವೇ ಹೊರತು ನಷ್ಟವಲ್ಲ. ಆದರೆ ಆಲಿಕಲ್ಲು ಹಾಗೂ ಅಕಾಲಿಕ ಮಳೆ ಬೀಳಬಾರದು ಅಷ್ಟೇ ಎನ್ನುತ್ತಾರೆ ದ್ರಾಕ್ಷಿ ಬೆಳೆಗಾರರಾದ ಮರಳುಕುಂಟೆ ಕೃಷ್ಣಮೂರ್ತಿ ಮತ್ತು ಅಜ್ಜವಾರ ಗ್ರಾಮದ ಕೆ.ಆರ್.ರೆಡ್ಡಿ.

ಚಿಕ್ಕಬಳ್ಳಾಪುರ ತಾಲೂಕಿನ ರೈತರ ದ್ರಾಕ್ಷಿ ತೋಟಗಳತ್ತ ಕಣ್ಣಾಯಿಸಿ ನೋಡಿದರೆ ಗೊಂಚಲು ಗೊಂಚಲು ಕಟ್ಟಿರುವ ದ್ರಾಕ್ಷಿ ಗೊನೆಗಳು ಕಣ್ಣಿಗೆ ರಾಚುತ್ತವೆ. ಉತ್ತಮ ಫಸಲು ಬಂದಿದ್ದು ಅಲ್ಲಲ್ಲಿ ಕಟಾವು ಕೂಡ ಶುರುವಾಗಿದೆ. ಆದರೆ ರೈತರಿಗೆ ಆಲಿಕಲ್ಲು ಹಾಗೂ ಅಕಾಲಿಕ ಮಳೆಯದ್ದೇ ಆತಂಕವಾಗಿದೆ. ಕಳೆದ ಮಾರ್ಚ್ ಮತ್ತು ಎಪ್ರಿಲ್ ತಿಂಗಳ ಅಂತ್ಯದಲ್ಲಿ ಬಿದ್ದ ಆಲಿಕಲ್ಲು ಸಹಿತ ಬಿರುಗಾಳಿ ಮಳೆಗೆ ಅಪಾರ ಪ್ರಮಾಣದ ದ್ರಾಕ್ಷಿ ನೆಲಕಚ್ಚಿ ರೈತರಿಗೆ ಅಪಾರ ಆರ್ಥಿಕ ನಷ್ಟ ಉಂಟು ಮಾಡಿತು. ಇದೀಗ ಮಾರುಕಟ್ಟೆಯಲ್ಲಿ ಉತ್ತಮ ಬೆಲೆ ಇದ್ದು ಇತಂಹ ಸಂದರ್ಭದಲ್ಲಿ ಮತ್ತೆ ಅಕಾಲಿಕ ಮಳೆ ಅಥವ ಆಲಿಕಲ್ಲು ಮಳೆ ಬಿದ್ದರೆ ದ್ರಾಕ್ಷಿಗೆ ಹೆಚ್ಚು ಪೆಟ್ಟು ಬೀಳುತ್ತದೆ.

ಜಿಲ್ಲೆಯಲ್ಲಿ ಹೆಚ್ಚಾಗಿ ದಿಲ್‌ಕುಷ್, ಆರ್‌ಕೆ ಗೋಲ್ಡ್, ಸೋನಾಕಾ, ರೆಡ್ ಬ್ಲೂ, ಶರತ್, ಸೀಡ್ ಲೆಸ್ ಹೀಗೆ ನಾನಾ ತಳಿಯ ದ್ರಾಕ್ಷಿ ಬೆಳೆಯುತ್ತಾರೆ. ಸದ್ಯಕ್ಕೆ ದಿಲ್ ಖುಷ್ ತಳಿಗೆ 40 ರು., ಶರತ್ ತಳಿಗೆ 100 ರು., ಸರಿತಾ ಕೃಷ್ಣ ತಳಿಗೆ 120 ರು. ರೆಡ್ ಗ್ಲೋಬ್ -140 ರಿಂದ 150 ರು.ವರೆಗೂ ಮಾರಾಟವಾಗುತ್ತಿದೆ. ಈ ತಳಿಯ ದ್ರಾಕ್ಷಿ ಬೆಳೆಗಾರರ ಬಳಿ ವರ್ತಕರುತೆರಳಿ ಮುಂಗಡ ಖರೀದಿ ಮಾಡುತ್ತಿದ್ದಾರೆ. ಆಗಿನ ಮಾರುಕಟ್ಟೆ ದರದಂತೆ ಕಟಾವು ಮಾಡುವ ಭರವಸೆಯನ್ನು ನೀಡುತ್ತಿದ್ದಾರೆ.

ಶಿಕ್ಷಕರ ಸಂಘ: ಜಿ.ಸುರೇಶ್ ಬಾಬು ತಂಡಕ್ಕೆ ಭರ್ಜರಿ ಗೆಲವು

ಶಿಕ್ಷಕ ಗೆಳೆಯರ ಬಳಗ, ಸುರೇಶ್‌ಬಾಬು, ಅನಿಲ್ ತಂಡಕ್ಕೆ ಗೆಲುವು | ಅಜಯ್‌ಕುಮಾರ್ ಬಣಕ್ಕೆ ತೀವ್ರ ಹಿನ್ನಡೆ

• **ಕನ್ನಡಪ್ರಭ ವಾರ್ತೆ** ಕೋಲಾರ

ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಚುನಾವಣೆ ಫಲಿತಾಂಶ ಪ್ರಕಟಗೊಂಡಿದ್ದು, ನೌಕರರ ಸಂಘದ ನಿಕಟಪೂರ್ವ ಅಧ್ಯಕ್ಷ ಜಿ.ಸುರೇಶ್ ಬಾಬು, ಶಿಕ್ಷಕರ ಗೆಳೆಯರ ಬಳಗದ ಅಧ್ಯಕ್ಷ ಕೋರಗಂಡಹಳ್ಳಿ ನಾರಾಯಣಸ್ವಾಮಿ, ಅನಿಲ್ ಕುಮಾರ್‌ನೇತೃತ್ವದ ತಂಡ ಎಲ್ಲಾ 20 ಸ್ಥಾನಗಳಲ್ಲೂ ಜಯಭೇರಿ ಬಾರಿಸಿದ್ದು, ಹಾಲಿ ನೌಕರರ ಸಂಘದ ಅಧ್ಯಕ್ಷ ಅಜಯ್‌ಕುಮಾರ್ ಬಣಕ್ಕೆ ತೀವ್ರ ಹಿನ್ನಡೆಯಾಗಿದೆ.

ಚುನಾವಣೆ ನಡೆದ ಎಲ್ಲಾ 20 ಸ್ಥಾನಗಳನ್ನು ತಮ್ಮದಾಗಿಸಿಕೊಂಡಿರುವ ಅನಿಲ್‌ಕುಮಾರ್‌ಹಾಗೂ ಶಿಕ್ಷಕ ಗೆಳೆಯರ ಬಳಗದ ತಂಡ ಗೆಲುವಿನ ನಗೆ ಬೀರಿದ್ದು, ಶಿಕ್ಷಕ ಗೆಳೆಯರ ಬಳಗದ ಅಧ್ಯಕ್ಷ ನಾರಾಯಣಸ್ವಾಮಿ ಹರ್ಷ ವ್ಯಕ್ತಪಡಿಸಿದ್ದಾರೆ.

ಚುನಾವಣೆಯಲ್ಲಿ ಗೆಲುವು ಸಾಧಿಸಿದವರೆಂದರೆ ನೌಕರರ ಸಂಘದ ಹಾಲಿ ನಿರ್ದೇಶಕರೂ ಆಗಿರುವ ಎಸ್.ಬಿ. ವೆಂಕಟಾಚಲಪತಿ ಗೌಡ - 594 ಮತ ಹಾಗೂ ಶಿಕ್ಷಕರ ಸಂಘದ ಮಾಜಿ ಜಿಲ್ಲಾಧ್ಯಕ್ಷರೂ



ಕೋಲಾರ ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಚುನಾವಣೆಯಲ್ಲಿ ಸಂಘದ ನಿಕಟಪೂರ್ವ ಅಧ್ಯಕ್ಷ ಜಿ.ಸುರೇಶ್ ಬಾಬು, ಶಿಕ್ಷಕರ ಗೆಳೆಯರ ಬಳಗದ ಅಧ್ಯಕ್ಷ ಕೋರಗಂಡಹಳ್ಳಿ ನಾರಾಯಣಸ್ವಾಮಿ, ಅನಿಲ್ ಕುಮಾರ್‌ನೇತೃತ್ವದ ತಂಡ ಎಲ್ಲಾ 20 ಸ್ಥಾನಗಳಲ್ಲೂ ಜಯಭೇರಿ ಬಾರಿಸಿ ವಿಜಯೋತ್ಸವ ಆಚರಿಸಿತು.

ಆಗಿರುವ ಅನಿಲ್ ಕುಮಾರ್- 697 ಮತ ಪಡೆದು ಗೆಲುವು ದಾಖಲಿಸಿದ್ದಾರೆ.

ಉಳಿದಂತೆ ಅಶ್ವಥಪ್ಪ - 606 ಮತ, ಆಯಾಜ್ ಅಹಮದ್ - 531 ಮತ , ಕೃಷ್ಣಪ್ಪ ಎನ್ - 620 ಮತ, ಮುನಿರಾಜು ಸಿ. -628 ಮತ , ನಾರಾಯಣಸ್ವಾಮಿ ಸಿ. - 658 ಮತ, ನಾರಾಯಣಸ್ವಾಮಿ . ಎಸ್ - 596 ಮತ, ಸತೀಶ .ಬಿ - 616 ಮತ, ಶಿವರಾಜ .ಕೆ - 568 ಮತ, ಸೋಮಶೇಖರ ವಿ - 590 ಮತ, ಸೊಣ್ಣೇಗೌಡ .ಕೆ.ಆರ್- 621 ಮತ ಹಾಗೂ ಸುಬ್ರಮಣ್ಯಂ .ಎಂ.ವಿ. - 586 ಮತ ಪಡೆದು ಅಭೂತಪೂರ್ವ ಗೆಲುವು ಸಾಧಿಸಿದ್ದಾರೆ.

ಮಹಿಳಾ ಕ್ಷೇತ್ರದಿಮದ ವಿಜೇತ ಪದಾಧಿಕಾರಿಗಳೆಂದರೆ ಶಿಕ್ಷಕರಾದ ವಿ.ಭಾಗ್ಯಲಕ್ಷ್ಮಮ್ಮ, ಕೆ.ಭಾಗ್ಯಮ್ಮ, ಕೆ.ಭಾರತಿ, ಎಸ್.ಜಯಲಕ್ಷ್ಮೀ, ರೇಷ್ಮತಲಾಖ್ ಖಾನಂ, ಆರ್.ಸವಿತಾ, ವಿ.ಮಂಜುಳಾ ಆಯ್ಕೆಯಾಗಿದ್ದಾರೆ.

ಎಲ್ಲಾ 20 ಸ್ಥಾನಗಳು ಶಿಕ್ಷಕ ಗೆಳೆಯರ ಬಳಗ, ನೌಕರರ ಸಂಘದ ನಿಕಟಪೂರ್ವ ಅಧ್ಯಕ್ಷ ಜಿ.ಸುರೇಶ್‌ಬಾಬು ಹಾಗೂ ಅನಿಲ್ ಕುಮಾರ್‌ಬಣದ ಪಾಲಾಗಿದೆ.

ಈ ಕುರಿತು ಪ್ರತಿಕ್ರಿಯಿಸಿರುವ ಶಿಕ್ಷಕ ಗೆಳೆಯರ ಬಳಗದ ಅಧ್ಯಕ್ಷ ನಾರಾಯಣಸ್ವಾಮಿ, ಈ ಅಭೂತಪೂರ್ವ ಗೆಲುವಿಗೆ ಶಿಕ್ಷಕ ಗೆಳೆಯರ ಬಳಗದ ನಿರಂತರ ಶೈಕ್ಷಣಿಕ ಸೇವೆಯೂ ಕಾರಣವಾಗಿದೆ. ಸರ್ಕಾರಿ ಶಾಲೆಗಳನ್ನು ಉಳಿಸುವ ನಮ್ಮ ಕಾಯಕ ಮುಂದುವರೆಯಲಿದ್ದು, ವಿವಿಧ ಕಂಪನಿಗಳ ದಾನಿಗಳ ನೆರವಿನಿಂದ ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಮತ್ತಷ್ಟು ಕೊಡುಗೆ ಹರಿಸುವ ಪ್ರಯತ್ನ ಮುಂದುವರೆಯಲಿದೆ ಎಂದು ತಿಳಿಸಿದರು.

ಶಿಕ್ಷಕರ ಸಂಘದ ಚುನಾವಣಾ ಫಲಿತಾಂಶ ಪ್ರಕಟಗೊಳ್ಳುತ್ತಿದ್ದಂತೆ ನೂರಾರು ಮಂದಿ ಶಿಕ್ಷಕರು ಹಾಜರಿದ್ದು ವಿಜಯೋತ್ಸವ ಆಚರಿಸಿದರು.

ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ



ಗೌರಿಬಿದನೂರು: ಬಿಜೆಪಿ ಪಕ್ಷದ ವತಿಯಿಂದ ಅಂಬೇಡ್ಕರ್‌ಜಯಂತಿ ಹಿನ್ನೆಲೆ ನಾಡಪ್ರಭು ಕೆಂಪೇಗೌಡ ವೃತದಿಂದ ನಗರದ ಮಹಾತ್ಮಾ ಗಾಂಧೀಜಿ ವೃತದವರೆಗೆ ಬೈಕ್ ರ್ಯಾಲಿ ನಡೆಸಲಾಯಿತು.

ನಗರದ ಗಾಂಧಿ ವೃತ್ತದಲ್ಲಿ ಏರ್ಪಡಿಸಿದ್ದ ವೇದಿಕೆ ಕಾರ್ಯಕ್ರಮವನ್ನು ಉದ್ದೇಶಿಸಿ, ಯಲಹಂಕ ಶಾಸಕ ಎಸ್ ಆರ್. ವಿಶ್ವನಾಥ್ ಮಾತನಾಡಿ, ದೇಶದಲ್ಲಿ ಅಂಬೇಡ್ಕರ್‌ಅವರನ್ನು ಏಪ್ರಿಲ್‌ನಲ್ಲಿ ಮಾತ್ರ ನೆನೆಸಿಕೊಳ್ಳುವುದು ದುರಂತ. ಅವರು ಅನೇಕ ಕಷ್ಟಗಳನ್ನು ಅನುಭವಿಸಿ, ಅತ್ಯಂತ ಕಠಿಣ ಪರಿಸ್ಥಿತಿಯಲ್ಲಿ ಉನ್ನತ ಶಿಕ್ಷಣ ಪಡೆದು ದೇಶಕ್ಕೆ ಬೇಕಾದ ಸಂವಿಧಾನ ರಚಿಸಿದ್ದಾರೆ. ಅಂಬೇಡ್ಕರ್‌ಬೇರೆ ದೇಶದಲ್ಲಿ ಹುಟ್ಟಿದ್ದರೆ ಅವರಿಗೆ ರಾಷ್ಟ ಅಧ್ಯಕ್ಷ ಸ್ಥಾನ ನೀಡುತ್ತಿದ್ದರು ಎಂದರು.

ಬಿಜೆಪಿ ಮುಖಂಡ ಎನ್.ಎಂ. ರವಿನಾರಾಯಣ ರೆಡ್ಡಿ ಮಾತನಾಡಿ, ದೇಶದ ಮಹಾ ಪುರುಷರನ್ನು ಒಂದು ಸಮುದಾಯಕ್ಕೆ ಸೀಮಿತ ಮಾಡಿಕೊಂಡಿದ್ದಾರೆ, ಅಂಬೇಡ್ಕರ್ ಅಂತಹ ಮಹಾನ್ ವ್ಯಕ್ತಿಯನ್ನು ಕೆಲವು ಸಂಘಟನೆಗಳು ಸೀಮಿತವಾಗಿಸಿವೆ ಎಂದು ಹೇಳಿದರು.

ಎಚ್.ಎಸ್. ಶಶಿಧರ್‌ಕುಮಾರ್‌ಮಾತನಾಡಿ, ಅಂಬೇಡ್ಕರ್‌ದೇಶದ ಜನರ ದೇವರಾಗಿದ್ದಾರೆ, ಅವರು 32 ಪದವಿಗಳನ್ನು ಗಳಿಸಿದ್ದಾರೆ, ಅವರ ನಿರಂತರ ಹೋರಾಟವನ್ನು ಗುರುತಿಸಿ, ಅವರಿಗೆ ಸಿಗಬೇಕಾಗಿದ್ದ ಎಲ್ಲಾ ಗೌರವವನ್ನು ಬಿಜೆಪಿ ನೀಡಿದೆ ಎಂದರು.

ಬಿಜೆಪಿ ರಾಜ್ಯ ಕಾರ್ಯದರ್ಶಿ ಮುನಿರಾಜು ಮಾತನಾಡಿದರು. ಇದೇ ಸಂದರ್ಭದಲ್ಲಿ, ಮಂಜುನಾಥ್ ರೆಡ್ಡಿ, ವೇಮರೆಡ್ಡಿ, ಬಿಜೆಪಿ ಎಸ್ ಟಿ ಮೋರ್ಚಾ ಅಧ್ಯಕ್ಷ ಭವ್ಯ, ರಂಗನಾಥ್, ಭರತ್ ರೆಡ್ಡಿ, ನಾರಾಯಣ ರೆಡ್ಡಿ, ಮಲ್ಲಿಕಾರ್ಜುನ ರೆಡ್ಡಿ, ಸನಂದ್ ಕುಮಾರ್, ಮುನಿಲಕ್ಷ್ಮಮ್ಮ, ಜಯಣ್ಣ ಇದ್ದರು.

ಪೂಜಮ್ಮ ದೇವಿ ಹೂವಿನ ಕರಗ ಮಹೋತ್ಸವ

ಶಿಡ್ಲಘಟ್ಟ: ತಾಲೂಕಿನ ಜಂಗಮಕೋಟೆಯಲ್ಲಿ ಪೂಜಮ್ಮ ದೇವಿ ಸೇವಾಭಿವೃದ್ಧಿ ಟ್ರಸ್ಟ್‌ನ ವತಿಯಿಂದ ಪೂಜಮ್ಮ ದೇವಿಯ 58 ನೇ ವರ್ಷದ ಹೂವಿನ ಕರಗ ಮಹೋತ್ಸವ ಅದ್ದೂರಿಯಾಗಿ ನೆರವೇರಿತು.

ಪೂಜಮ್ಮ ದೇವಾಲಯ, ಮದಗದಮ್ಮ ದೇವಾಲಯಗಳಿಗೆ ಅಲಂಕಾರ ಮಾಡಲಾಗಿತ್ತು. ಕರಗ ಮಹೋತ್ಸವದ ಅಂಗವಾಗಿ ಗ್ರಾಮದ ಬೀದಿಗ ಳನ್ನು ವಿದ್ಯುತ್ ದೀಪಗಳಿಂದ ತಳಿರು ತೋರಣಗಳಿಂದ ಅಲಂಕಾರ ಮಾಡ ಲಾಗಿತ್ತು. ಆರತಿ ದೀಪೋತ್ಸವಗಳು ನೆರವೇರಿದವು. ಅನ್ನಸಂತರ್ಪಣೆ ಮತ್ತು ದೇವಿಗೆ ಅಲಂಕಾರ ಮಾಡಲಾ ಗಿತ್ತು. ಗೋವು ಪೂಜೆ, ಒನಕೆ ಕುಣಿತ ನಡೆಯಿತು. ವಸಂತೋತ್ಸವ ನಡೆಯಿತು.

ಹೂವಿನ ಕರಗವನ್ನು ಹೊತ್ತಿದ್ದ ಕರಗದ ಪೂಜಾರಿ ಅವರು, ಪ್ರಮುಖ ಬೀದಿಗಳಲ್ಲಿ ಸಂಚರಿಸಿ, ಸಾರ್ವಜನಿ



ಶಿಡ್ಲಘಟ್ಟ ತಾಲೂಕಿನ ಜಂಗಮಕೋಟೆಯಲ್ಲಿ, ಪೂಜಮ್ಮ ದೇವಿಯ ಹೂವಿನ ಕರಗ ಮಹೋತ್ಸವ ಅದ್ದೂರಿಯಾಗಿ ನೆರವೇರಿತು.

ಕರಿಂದ ಪೂಜೆ ಸ್ವೀಕರಿಸಿದರು. ಭಕ್ತರು, ಮಲ್ಲಿಗೆ ಹೂಗಳನ್ನು ಎರಚಿ, ಕರಗಕ್ಕೆ ನಮನ ಸಲ್ಲಿಸಿದರು. ವೀರಕುಮಾರರು ಕರಗವನ್ನು ಹಿಂಬಾ ಲಿಸಿದರು. ಅಲಗು ಸೇವೆ ಸಮರ್ಪಿಸಿ ದರು. ಕರಗ ಸಾಗುವ ಮುಖ್ಯ ರಸ್ತೆಗಳಲ್ಲಿ, ರಂಗೋಲಿಗಳನ್ನು ಬಿಡಿಸಿ, ಮಹಿಳೆಯರು, ಮಕ್ಕಳು ಕರಗಕ್ಕೆ ಪೂಜೆ ಸಲ್ಲಿಸಿದರು.

ಪಿಸಿ ಬಡಾವಣೆ ರೇಣುಕಾ ಯಲ್ಲಮ್ಮ ದೇವಿ ಕರಗ

ಕೋಲಾರ: ನಗರದ ಪಿ.ಸಿ. ಬಡಾವಣೆಯ ರೇಣುಕಾಂಬ ಸೇವಾ ಸಮಿತಿ ಯಿಂದ ರೇಣುಕಾ ಯಲ್ಲಮ್ಮ ದೇವಿಯ ಕರಗ ಮಹೋತ್ಸವದ ಸಮಾರೋಪದ ಅಂಗವಾಗಿ ಭಾನು ವಾರ ಸಂಜೆ ನಡೆದ ಒನಕೆ ಕರಗದ ನೃತ್ಯ ಜನ ಮನ ಸೂರೆಗೊಂಡಿದ್ದು, ರಸ್ತೆ ಇಕ್ಕೆಲಗಳಲ್ಲಿ ಕಟ್ಟಡಗಳ ಮೇಲೆ ನಿಂತು ಸಹಸ್ರಾರು ಮಂದಿ ನೃತ್ಯ ಕಣ್ತುಂಬಿಕೊಂಡರು.

ಸುಮಾರು 5 ಅಡಿ ಉದ್ದದ ಒನಕೆ ಮೇಲೆ ನೀರು ತುಂಬಿದ ತಾಮ್ರದ ಪಾತ್ರೆಯನ್ನಿಟ್ಟು ಒನಕೆ ತಲೆಯ ಮೇಲಿಟ್ಟು ಕೊಂಡು ಅದರಲ್ಲಿನ ವಸಂತದ ನೀರನ್ನು ನೃತ್ಯ ಪ್ರದರ್ಶನದ ಮೂಲಕ ಹೊರಚೆಲ್ಲುವ ಕರಗದ ಪೂಜಾರಿ ಮಂಜುನಾಥ್‌ರ ಕಲಾ ಪ್ರೌಢಿಮೆಯ ಸಾಹಸಕ್ಕೆ ಜನ ತಲೆದೂಗಿದರು. ಒನಕೆ ಕೈಯಿಂದ ಹಿಡಿಯದೇ ಒಂದು ತುದಿಯ ಮೇಲೆ ನೀರು ತುಂಬಿದ ಪಾತ್ರೆಯಿಟ್ಟು, ಮತ್ತೊಂದು ತುದಿತಲೆ ಮೇಲಿಟ್ಟುಕೊಂಡು ನರ್ತಿಸುವ ಮೂಲಕ ಜನತೆ ನಿಬ್ಬೆರಗಾಗುವಂತೆ ಮಾಡಿದರು.



34ನೇ ವರ್ಷದ ಕರಗ ಮಹೋತ್ಸವದ ಅಂಗವಾಗಿ ಒನಕೆ ಕರಗ ನೃತ್ಯಕ್ಕೂ ಮುನ್ನಾ ವಸಂತದ ನೀರು ತುಂಬಿದ ಏಳು ಕಳಶಗಳನ್ನು ಒಂದರ ಮೇಲೊಂದರಂತೆ ಜೋಡಿಸಿಕೊಂಡು ತಲೆಯ ಮೇಲಿಟ್ಟು ಮಾಡಿದ ನೃತ್ಯ ಮನಮೋಹಕವಾಗಿತ್ತು. ದೇವಾಲಯ ಸಮಿತಿ ಸದಸ್ಯ ಆರ್ಮುಗಂ ಕುಟುಂಬದವರು ಒನಕೆ ಕರಗ ನಡೆಯುವ ದಿನದಂದು ಕಾರ್ಯಕ್ರಮ ವೀಕ್ಷಣೆಗೆ ಆಗಮಿಸುವ ಎಲ್ಲಾ ಭಕ್ತರಿಗೆ ಪ್ರತಿ ವರ್ಷವೂ ಪ್ರಸಾದ ವಿತರಿಸಿದರು. ರೇಣುಕಾ ಯಲ್ಲಮ್ಮ ದೇವಾಲಯ ಸಮಿತಿ ಅಧ್ಯಕ್ಷ ಕೆ.ಗಣೇಶ್ ಕರಗ ಮಹೋತ್ಸವದ ನೇತೃತ್ವ ವಹಿಸಿದ್ದು, ಕಾರ್ಯ ಕ್ರಮದಲ್ಲಿ ಕಾಂಗ್ರೆಸ್ ಎಸ್ಸಿ ಘಟಕದ ಅಧ್ಯಕ್ಷ ಕೆ.ಜಯದೇವ್, ಅರ್ಚಕರಾದ ಸುರೇಶಾಚಾರ್ಯ, ಮೇಸ್ತ್ರೀ ಕೆ.ಆರ್ಮುಗಂ, ಪತ್ರಕರ್ತ ದುನಿಯಾ ಮುನಿಯಪ್ಪ, ದೇವಾಲಯ ಸಮಿತಿ ಉಪಾಧ್ಯಕ್ಷ ಚಂದ್ರಪ್ರಕಾಶ್, ಖಜಾಂಚಿ ಕೆ.ಎಸ್.ಮಂಜುನಾಥ್, ಕಾರ್ಯದರ್ಶಿ ಕಲಾ ರಮೇಶ್, ಉಪಕಾರ್ಯದರ್ಶಿ ವಿ.ಸುರೇಶ್, ಟಿ. ಸಂಪತ್, ಮುತ್ತಪ್ಪ, ಗಣೇಶ್ ಇದ್ದರು.

ಆಲಿಕಲ್ಲು ಮಳೆಗೆ ನೆಲಕಚ್ಚಿದ ಬಾಳೆ ಫಸಲು

ಕಳೆದೆರಡು ದಿನದಿಂದ ಗಾಳಿ, ಆಲಿಕಲ್ಲು ಮಳೆ | ಐದು ಲಕ್ಷ ಖರ್ಚು ಮಾಡಿದ್ದ ಬೆಳೆ

ಟೇಕಲ್: ಕಳೆದೆರಡು ದಿನದಿಂದ ಗಾಳಿ, ಆಲಿಕಲ್ಲು ಮಳೆ ಬೀಳುತ್ತಿದ್ದು ಹುಳದೇನಹಳ್ಳಿ ರೈತ ಹೆಚ್.ಆರ್.ರಾಮೇಗೌಡ ಅವರ ತೋಟದಲ್ಲಿ ಏಲಕ್ಕಿ ಬಾಳೆಗೆ ಹಾನಿಯಾಗಿದೆ. ಸುಮಾರು ನಾಲ್ಕರಿಂದ ಐದು ಲಕ್ಷ ಖರ್ಚು ಮಾಡಿ ನಾಟಿ ಮಾಡಿದ ಬಾಳೆ ತೋಟ ನೆಲಕ್ಕುರುಳಿದ್ದು ಶೇ. 65ರಷ್ಟು ಬೆಳೆ ನಷ್ಟವಾಗಿದೆ. ಇದರಿಂದ ರೈತ ಸಾಲ ತೀರಿಸಲಾಗದೆ ರೈತ ಕಂಗಲಾಗಿದ್ದಾನೆ.

ಸುಮಾರು ಒಂದೂವರೆ ಎಕರೆಯಷ್ಟು ಬಾಳೆ ತೋಟವಿದ್ದು, ಸುಮಾರು 1800 ಗಿಡಗ ಳನ್ನು ನೆಟ್ಟಿದ್ದರು. ಬಿರುಗಾಳಿ



ಆಲಿ ಕಲ್ಲು ಮಳೆಗೆ ಸಂಪೂರ್ಣ ನೆಲ ಕಚ್ಚಿದ್ದು, ರೈತನಿಗೆ ಕೈಗೆ ಬಂದಿದ್ದ ಬೆಳೆ ಬಾಯಿಗೆ ಬಾರದಂತೆ ಆಗಿದೆ. ಸಂಬಂಧಪಟ್ಟ ಅಧಿಕಾರಿಗಳು ತೋಟ ಪರಿಶೀಲಿಸಿ ರೈತನಿಗಾದ ಹಾನಿ ಸರ್ಕಾರದಿಂದ ಪರಿಹಾರ ನೀಡಬೇಕೆಂದು ಮನವಿ ಮಾಡಿದ್ದಾರೆ.

ರೈತ ಎಚ್.ಆರ್‌ರಾಮೇಗೌಡರ ಏಲಕ್ಕಿ ಬಾಳೆ ತೋಟಕ್ಕೆ ತೋಟಗಾರಿಕೆ ಇಲಾಖೆ ಸಹಾಯಕ ತೋಟಗಾರಿಕೆ ಅಧಿಕಾರಿ ಅರ್ಚನಾ ಭೇಟಿ ನೀಡಿ ಮಾಹಿತಿ ಪಡೆದು ಅದನ್ನು ನಿಯಮಾನುಸಾರ ನಷ್ಟ ಪರಿಹಾರಕ್ಕೆ ಜಿಲ್ಲಾ ಮಟ್ಟಕ್ಕೆ ಮಾಹಿತಿ ಒದಗಿಸಿದ್ದಾರೆ.

3,000 ಗಿಡಗಳ ನಾಟಿ

ಶಿಡ್ಲಘಟ್ಟ: ಕಾನೂನು ಸೇವೆಗಳ ಪ್ರಾಧಿಕಾರ, ಅರಣ್ಯ ಇಲಾಖೆ, ಶಿಕ್ಷಣ ಇಲಾಖೆ ಮತ್ತು ಧರೆ ಫೌಂಡೇಶನ್ ಸಹಕಾರದೊಂದಿಗೆ ತಾಲೂಕಿನ ಗೊರ್ಲಗುಮ್ಮನಹಳ್ಳಿ 11ನೇ ಮೈಲಿಯ ಮೊರಾರ್ಜಿ ದೇಸಾಯಿ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ಜಪಾನಿನ ಮಿಯಾವಾಕಿ ಪದ್ಧತಿಯಲ್ಲಿ 3000 ಗಿಡಗಳನ್ನು ನೆಡಲಾಯಿತು.

ಗಿಡ ನೆಡುವ ಕಾರ್ಯಕ್ರಮಕ್ಕೆ ಚಾಲನೆ ಹಿರಿಯ ಸಿವಿಲ್ ನ್ಯಾಯಾಧೀಶ ಮೊಹಮ್ಮದ್ ರೋಷನ್ ಷಾ ನೀಡಿದರು. ಪ್ರಾಂಶುಪಾಲ ನಾರಾಯಣಸ್ವಾಮಿ, ರೈತ ಸಂಘದ ತಿಮ್ಮನಾಯಕನಹಳ್ಳಿ ಅರುಣ್ ಕುಮಾರ್, ಧರೆ ಫೌಂಡೇಶನ್ ಪ್ರಸನ್ನ, ವಕೀಲರಾದ ಶ್ರೀನಿವಾಸ್, ಲಕ್ಷ್ಮೀನರಸಿಂಹ, ಉಪನ್ಯಾಸಕರಾದ ಕುಮಾರ್, ಸೌಭಾಗ್ಯ ಇದ್ದರು.

ವೇಣುಗೋಪಾಲ ಸ್ವಾಮಿ ರಥೋತ್ಸವ



ಕೃಷ್ಣಮ್ಮನ ಹೊಸಹಳ್ಳಿ ಗ್ರಾಮದಲ್ಲಿ ವೇಣುಗೋಪಾಲ ಸ್ವಾಮಿಯ ಬ್ರಹ್ಮರಥೋತ್ಸವ ನಡೆಯಿತು.

ಚಿಂತಾಮಣಿ: ತಾಲೂಕಿನ ಕೃಷ್ಣಮ್ಮನ ಹೊಸಹಳ್ಳಿ ಗ್ರಾಮದಲ್ಲಿ ವೇಣುಗೋಪಾಲ ಸ್ವಾಮಿಯ ಬ್ರಹ್ಮರಥೋತ್ಸವವು ಅದ್ದೂರಿ ಯಾಗಿ ನಡೆಯಿತು.

ವೇಣುಗೋಪಾಲ ಸ್ವಾಮಿ ದೇವಾಲಯದಲ್ಲಿ ಸ್ವಾಮಿಗೆ ವಿಶೇಷ ಪೂಜೆ ಹೋಮ ಹವನಾದಿಗಳನ್ನು ಅರ್ಚಕ ಗೋಪಾಲಚಾರಿ ನಡೆಸಿದರು. ಬ್ರಹ್ಮರಥೋತ್ಸವದಲ್ಲಿ ಅಲಂಕೃತ ದೇವರ ಮೂರ್ತಿಯನ್ನಿಟ್ಟು ದೇವಾಲಯದ ಸುತ್ತಲೂ ರಥವನ್ನು ಎಳೆದರು, ಭಕ್ತರು ಬಾಳೆಹಣ್ಣು ಮತ್ತು ಧವನವನ್ನು ರಥಕ್ಕೆ ಎಸೆದು ತಮ್ಮ ಇಷ್ಟಾರ್ಥಗಳು ಈಡೇರಿಸುವಂತೆ ಪ್ರಾರ್ಥಿಸಿದರು.

ಧರ್ಮಕರ್ತ ಸೋಮಶೇಖರ್, ಸಂಯೋಜಕ (ಕನ್ವೀನರ್) ಹನುಮಂತರಾಯಪ್ಪ ಮಾತನಾಡಿ ಶ್ರೀ ವೇಣುಗೋಪಾಲ ಸ್ವಾಮಿ ಬ್ರಹ್ಮರಥೋತ್ಸವವನ್ನು ಸಂಪ್ರದಾಯ ಬದ್ಧವಾಗಿ ತಲೆತಲಾಂತರಗಳಿಂದ ನಡೆಸುಕೊಂಡು ಬರುತ್ತಿದ್ದು ಇದಕ್ಕೆ ಸಾಕ್ಷಿಯೆಂಬಂತೆ 1920ರಲ್ಲಿ ಇಲ್ಲಿ ಬ್ರಹ್ಮರಥೋತ್ಸವವು ನಡೆದಿರುವುದಕ್ಕೆ ದಾಖಲೆಗಳಿದೆ ಎಂದರು.

ಮಜ್ಜಿಗೆ, ಪಾನಕ, ಕೊಸಂಬರಿ ಹಾಗೂ ರಥೋತ್ಸವದ ನಂತರ ಭಕ್ತಾದಿಗಳಿಗೆ ಅನ್ನದಾಸೋಹವನ್ನು ಏರ್ಪಡಿಸಲಾಗಿತ್ತು.

ಕೈವಾರದ ನಾರಾಯಣ ತಾತಯ್ಯನವರ 300ನೇ ಜಯಂತ್ಯುತ್ಸವ

ಚಿಕ್ಕಬಳ್ಳಾಪುರ: ಶ್ರೀ ಕ್ಷೇತ್ರ ಕೈವಾರದ ಸದ್ಗುರು ಶ್ರೀ ನಾರಾಯಣತಾತಯ್ಯನವರ 300ನೇ ಜಯಂತೋತ್ಸವ ಪ್ರಯುಕ್ತ ಚಿಕ್ಕಬಳ್ಳಾಪುರ-ಕೋಲಾರ ಈ ಎರಡೂ ಜಿಲ್ಲೆಯಾದ್ಯಂತ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಸರ್ವ ಭಕ್ತರು ಪಾಲ್ಗೊಳ್ಳಲು ಕೈವಾರದ ಸಂಗೀತ ಸಂಚಾಲಕರಾದ ಬಾಲಕೃಷ್ಣ ಭಾಗವತರ್‌ಮನವಿ ಮಾಡಿದರು.

ನಗರದ ಧರ್ಮಛತ್ರ ರಸ್ತೆಯ ಶ್ರೀ ವಿದ್ಯಾ ಗಣಪತಿ(ದೊಡ್ಡಗಣಪತಿ)ದೇವಾಲಯದ ಆವರಣದಲ್ಲಿ ಸದ್ಗುರು ಶ್ರೀ ಯೋಗಿ ನಾರೇಯಣ ತಾತಯ್ಯನವರ 300ನೇ ಜಯಂತ್ಯುತ್ಸವ ಪ್ರಯುಕ್ತ ನಡೆದ ಸಭೆಯಲ್ಲಿ ಮಾತನಾಡಿ, ಸದ್ಗುರು ತಾತಯ್ಯನವರ ಜನ್ಮ ತ್ರಿಶತಮಾನೋತ್ಸವ ಜಯಂತ್ಯುತ್ಸವವನ್ನು ಭಕ್ತಿಯಿಂದ ಆಚರಿಸಲು ಶ್ರೀಸದ್ಗುರು ಯೋಗಿನಾರೇಯಣಮಠ ಟ್ರಸ್ಟ್‌ಸಮಿತಿಯು ತೀರ್ಮಾನಿಸಿದ್ದು ಆ ನಿಟ್ಟಿನಲ್ಲಿ ಮುಂಬರುವ ಒಂದು ವರ್ಷಗಳ ಕಾಲ ನಿರಂತರವಾಗಿ ಚಿಕ್ಕಬಳ್ಳಾಪುರ ಹಾಗೂ ಕೋಲಾರ ಜಿಲ್ಲೆಗಳ ಎಲ್ಲಾ ತಾಲೂಕುಗಳಲ್ಲಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಸದ್ಗುರು



ದೊಡ್ಡಗಣೇಶ ದೇವಾಲಯದಲ್ಲಿ ನಡೆದ ಸಭೆಯಲ್ಲಿ ಕೈವಾರ ತಾತಯ್ಯನವರ 300ನೇ ಜಯಂತ್ಯುತ್ಸವ ಕಾರ್ಯಕ್ರಮ ಕುರಿತಾದ ಕರಪತ್ರಗಳನ್ನ ಬಾಲಕೃಷ್ಣ ಭಾಗವತರ್‌ಬಿಡುಗಡೆ ಮಾಡಿದರು.

ತಾತಯ್ಯನವರ ವೈಭವವನ್ನು ಎಲ್ಲೆಡೆ ಸಾರಲಾಗುತ್ತದೆ. ಇದಕ್ಕೆ ಸರ್ವ ಭಕ್ತರು ಕೈಜೋಡಿಸಿ ಭಾಗಿಯಾಗುವಂತೆ ಮನವಿ ಮಾಡಿದರು.

ಜಯಂತ್ಯುತ್ಸವ ಪ್ರಯುಕ್ತ ನಗರದ ಇದೇ ದೊಡ್ಡ ಗಣಪತಿ ದೇವಾಲಯದ ಅವರಣದಲ್ಲಿ ಮೇ 3 ರಿಂದ 8ರವರೆಗೆ ದಿನ ಪ್ರತಿ ಸಂಜೆ 6:30 ರಿಂದ 8:30ರ ವರೆಗೆ ತೆಲುಗು ''ಪೊತನ ಭಾಗವತ'' ಹಾಗೂ ''ಶ್ರೀ ಅಮರ ನಾರೇಯಣ ಶತಕ''ದ ಪ್ರವಚನ ಸಪ್ತಾಹ ಕಾರ್ಯಕ್ರಮ ನಡೆಯಲಿದೆ. ಮೇ 9 ರಂದು ಕೈವಾರದಲ್ಲಿ ಸಂಜೆ 5 ಗಂಟೆಗೆ ನಾರೇಯಣ ಪ್ರಶಸ್ತಿ ಪ್ರಧಾನ ಸಮಾರಂಭ ಕೈವಾರ ತಾತಯ್ಯನವರ ತತ್ವ ಬೋಧನೆಗಳಿಗೆ ಅರ್ಥ -ವಾಕ್ಯಾನ - ತಾತ್ಪರ್ಯಗಳನ್ನು ರಚಿಸಿ ಅಪಾರ ಕೊಡುಗೆಯನ್ನು ನೀಡಿರುವ ದಿವಂಗತ ಶ್ರೀ ಕೈಪುಲಕ್ಷ್ಮೀ ನರಸಿಂಹಶಾಸ್ತ್ರಿಗಳಿಗೆ ಮರಣೋತ್ತರವಾಗಿ ''ನಾರೇಯಣ ಪ್ರಶಸ್ತಿ ಪ್ರಧಾನ'' ಹಾಗೂ ವಿಶೇಷ ''ಆತ್ಮಭೋಧಾಮೃತ'' ಕಾರ್ಯಕ್ರಮವನ್ನು ಶ್ರೀ ಕ್ಷೇತ್ರ ಕೈವಾರದ ಪೂಜ್ಯ ಧರ್ಮಾಧಿಕಾರಿಗಳಾದ ಡಾ. ಎಂ.ಆರ್. ಜಯರಾಮ್ ನಡೆಸಿಕೊಡಲಿದ್ದಾರೆ ಎಂದರು.

ಮೇ 16 ರಂದು ಶನಿವಾರ ಶ್ರೀರಾಮ ದಂಡು ಸಂಕೀರ್ತನ ಪಾದಯಾತ್ರೆಯು ಅಂದು ಬೆಳಿಗ್ಗೆ 6 ಗಂಟೆಗೆ ಚಿಕ್ಕಬಳ್ಳಾಪುರ ತಾಲೂಕಿನ ಬಂಡಹಳ್ಳಿ ಶ್ರೀ ಮಲ್ಲೆಮ್ಮ ದೇವಾಲಯದಿಂದ ಆರಂಭಗೊಳ್ಳಲಿದ್ದು ಮಂಡಿ ಕಲ್ಲು ಶ್ರೀ ಆಂಜನೇಯ ಸ್ವಾಮಿ ದೇವಾಲಯದಲ್ಲಿ ಈ ಕಾರ್ಯಕ್ರಮವನ್ನು ಸಮರ್ಪಣೆ ಮಾಡಲಾಗುವುದು ಎಂದರು.

31ರಂದು ಭಾನುವಾರ ''ಶ್ರೀ ರಾಮಭವತಾರಕಮಂತ್ರ ಕೋಟಿ ಜಪಯಜ್ಞ'' ಅಂದು ಬೆಳಗ್ಗೆ 6 ಗಂಟೆಯಿಂದ ಮರುದಿನ ಬೆ. 6 ಗಂಟೆ ವರೆಗೆ ಕೈವಾರದ ಯೋಗನರಸಿಂಹಸ್ವಾಮಿ ದೇವಾಲಯದ ಗವಿ ವೈಕುಂಠಯಾಗ ಶಾಲೆಯಲ್ಲಿ ನಡೆಯಲಿದೆ ಎಂದರು.

ಸಭೆಯಲ್ಲಿ ಸದಸ್ಯರಾದ ವೆಂಕಟರಮಣಪ್ಪ, ಕೈವಾರ ಆನಂದ್, ಕಾರ್ಯದರ್ಶಿ ಲಕ್ಷ್ಮಿ ನಾರಾಯಣ, ಜಗದೀಶ್, ಪುರದಗಡ್ಡೆ ಪಿ.ಎನ್ ಕೃಷ್ಣಪ್ಪ, ಜಿಎನ್ ವೆಂಕಟೇಶ್, ಗಂಗಾಧರಪ್ಪ, ಬಾಲಕೃಷ್ಣ ಭಜನೆ ಮಂದಿರದ ಕಿಟ್ಟಿ, ಚಿಂತಲಪಲ್ಲಿ ಸೋಮಶೇಖರ್ ಇತರರಿದ್ದರು.